ಸುದ್ದಿ ಹಾಗೂ ಜಾಹೀರಾತಿಗೆ ಸಂಪರ್ಕಿಸಿ
9980498553
9606979449

RNI: KNKAN/ 25/A2724

# ಉತ್ತರ ಕರ್ನಾಟಕ ಸುದ್ದಿಗಳು

ಕನ್ನಡ ದಿನಪತ್ರಿಕೆ

UTTARA KARNATAKA SUDDIGALU
Kannada Daily Morning

Email
uttarkarnatkasuddigalu@gmail.com

ಸಂಪಾದಕರು: ಅವಿನಾಶ ಎಸ್. ಸಾಲಿಮನಿ




ನಾಲ್ಕು ಪದವೀಧರ ಕ್ಷೇತ್ರದಲ್ಲೂ ಬಿಜೆಪಿಗೆ ಭರ್ಜರಿ ಗೆಲುವು: ಜೋಶಿ 3

ಸೂಕ್ಷ್ಮ ಪ್ರಕರಣದ ತನಿಖೆಯನ್ನು ಮುಖ್ಯಮಂತ್ರಿ ಗಂಭೀರವಾಗಿ ಪರಿಗಣಿಸಲಿ 3

ಮಹರ್ಷಿ ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆ ಬಹಿಷ್ಕಾರ 4

ಸಂಪುಟ(Volume): 1 ಸಂಚಿಕೆ (Issue): 302 ● ಪುಟ (Page): 4 ● ದರ: Rs. 4 ಶನಿವಾರ 17 ಅಕ್ಟೋಬರ್ 2026 ● 17 OCTOBER 2026

● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ ● ಬೆಳಗಾವಿ ಉತ್ತರ ಕನ್ನಡ

# ರಾಹುಲ್ ಗಾಂಧಿ ಮೇಲೆ ಗರ್ಭಿಣಿ ಪತ್ರಕರ್ತೆ ತಳ್ಳಿದ ಆರೋಪ

## ಅ. 26 ಅಥವಾ 27ರಂದು ವಿಚಾರಣೆ ನಡೆಸಲು ಒಪ್ಪಿಗೆ ಸೂಚಿಸಿದ ಸುಪ್ರೀಂ ಕೋರ್ಟ್

**ದೆಹಲಿ:** ಅಕ್ಟೋಬರ್ 12 (ಸೋಮವಾರ) ರಂದು ಸುಪ್ರೀಂಕೋರ್ಟ್ ಕಡೆಗೆ ನಡೆದ ಮೆರವಣಿಗೆಯ ವೇಳೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಗರ್ಭಿಣಿ ಪತ್ರಕರ್ತೆಯೊಬ್ಬರನ್ನು ತಳ್ಳಿದ್ದರು ಎಂದು ಆರೋಪಿಸುವ ಅರ್ಜಿಯೊಂದರ ವಿಚಾರಣೆ ನಡೆಸಲು, ಸುಪ್ರೀಂಕೋರ್ಟ್ ಇಂದು (ಅ.16–ಶುಕ್ರವಾರ) ಒಪ್ಪಿಕೊಂಡಿದೆ.



ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್ಮಾಲ್ಯ ಬಾಗ್ಚಿ ಅವರಿದ್ದ ಪೀಠ, ಈ ಅರ್ಜಿಯ ವಿಚಾರಣೆಯನ್ನು ಅಕ್ಟೋಬರ್ 26 ಅಥವಾ ಅಕ್ಟೋಬರ್ 27ರಂದು ನಡೆಸಲಾಗುವುದು ಸ್ಪಷ್ಟಪಡಿಸಿತು. ಈ ವಿಷಯವನ್ನು ಪ್ರಸ್ತಾಪಿಸಿದ ಹಿರಿಯ ವಕೀಲ ಗೌರವ್ ಭಾಟಿಯಾ, ಈಗಾಗಲೇ ಬಾಕಿ ಇರುವ ಅರ್ಜಿಯೊಂದರ ಸಂಬಂಧ ಈ ಹೊಸ ಅರ್ಜಿಯನ್ನು ಸಲ್ಲಿಸಲಾಗಿದೆ ಎಂದು ತಿಳಿಸಿದರು.

"ಅಕ್ಟೋಬರ್ 12ರಂದು ನಡೆದ ಮೆರವಣಿಗೆಯ ವೇಳೆ, ಸುಪ್ರೀಂಕೋರ್ಟ್ ಆವರಣದಲ್ಲಿ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ವಿರುದ್ಧ ಗರ್ಭಿಣಿ ಪತ್ರಕರ್ತೆಯನ್ನು ತಳ್ಳಿದ ಆರೋಪ ಕೇಳಿಬಂದಿದೆ. ಈ ಪ್ರಕರಣವನ್ನೂ ಪ್ರಕರಣವನ್ನೂ ವಿಚಾರಣೆಗೆ ಪರಿಗಣಿಸಬೇಕು" ಎಂದು ಗೌರವ್ ಭಾಟಿಯಾ ಗುರುವಾರ ನ್ಯಾಯಪೀಠಕ್ಕೆ ಮನವಿ ಮಾಡಿದ್ದರು.

"ಸುಪ್ರೀಂ ಕೋರ್ಟ್ ಆವರಣದಲ್ಲಿ ರಾಹುಲ್ ಗಾಂಧಿ ಅವರು ಮಹಿಳಾ ಪತ್ರಕರ್ತೆಯೊಬ್ಬರನ್ನು ತಳ್ಳಿದರು. ಅವರು ಮೂರು ತಿಂಗಳ ಗರ್ಭಿಣಿಯಾಗಿದ್ದು, ಆಸ್ಪತ್ರೆಗೆ ದಾಖಲಾಗಬೇಕಾಯಿತು. ಹೀಗಾಗಿ ಈ ವಿಷಯವನ್ನು ಸುಪ್ರೀಂಕೋರ್ಟ್ ಗಂಭೀರವಾಗಿ ಪರಿಗಣಿಸಬೇಕು" ಎಂದು ವಕೀಲ ಗೌರವ್ ಭಾಟಿಯಾ ಆಗ್ರಹಿಸಿದರು.

**ಸುಪ್ರೀಂಕೋರ್ಟ್ ಪ್ರತಿಕ್ರಿಯೆ ಏನು?:** ರಾಹುಲ್ ಗಾಂಧಿ ಗರ್ಭಿಣಿ ಪತ್ರಕರ್ತೆಯನ್ನು ತಳ್ಳಿದ ಆರೋಪಕ್ಕೆ ಸಂಬಂಧಿಸಿದ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸುವುದಾಗಿ ಹೇಳಿದ ನ್ಯಾಯಾಲಯ, ಈ ಸಂಬಂಧ



ಅರ್ಜಿಯೊಂದನ್ನು ಸಲ್ಲಿಸುವಂತೆ ವಕೀಲ ಗೌರವ್ ಭಾಟಿಯಾ ಅವರಿಗೆ ಸೂಚನೆ ನೀಡಿದೆ. ಇದೇ ವೇಳೆ ಜಂತರ್ ಮಂತರ್ ಬಳಿ ನಡೆದ ಪ್ರತಿಭಟನೆಯ ಸಂದರ್ಭದಲ್ಲಿ, ತಮ್ಮ ವಿರುದ್ಧ ಜಾತಿ ನಿಂದನೆ ಮತ್ತು ಸಾರ್ವಜನಿಕ ಅವಮಾನ ಎಸಗಿದ್ದಾರೆ ಎಂದು ದೆಹಲಿ ಪೊಲೀಸ್ ಅಧಿಕಾರಿಯೊಬ್ಬರು ದೂರು ದಾಖಲಿಸಿರುವ ಮಹಿಳಾ ಪತ್ರಕರ್ತೆಯೊಬ್ಬರ ವಿರುದ್ಧ, ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು ಎಂದು ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ.

**ಅಕ್ಟೋಬರ್ 12ರ ಮೆರವಣಿಗೆಯ ಹಿನ್ನೆಲೆ:** ಮತದಾರರ ಪಟ್ಟಿಗಳ 'ವಿಶೇಷ ತೀವ್ರ ಪರಿಷ್ಕರಣೆ' (ಖಖಖ) ಪ್ರಕ್ರಿಯೆಯಲ್ಲಿ ವ್ಯಾಪಕವಾಗಿ ಮತದಾರರ ಹೆಸರುಗಳನ್ನು ಕೈಬಿಟ್ಟಿರುವುದು ಮತ್ತು ಅಕ್ರಮಗಳು ನಡೆದಿವೆ ಎಂದು ಆರೋಪಿಸಿ, ರಾಹುಲ್ ಗಾಂಧಿ ಮತ್ತು ವಿರೋಧ ಪಕ್ಷದ ಹಲವು ಪ್ರಮುಖ ನಾಯಕರು ತಮ್ಮ ಬೆಂಬಲಿಗರೊಂದಿಗೆ ಅಕ್ಟೋಬರ್ 12 ರಂದು ಸುಪ್ರೀಂಕೋರ್ಟ್‌ಗೆ ಆಗಮಿಸಿ ಅರ್ಜಿ ಸಲ್ಲಿಸಿದ್ದರು. ಎಸ್‌ಐಆರ್ ಪ್ರಕ್ರಿಯೆಯಲ್ಲಿ ಅಕ್ರಮಗಳು ನಡೆದಿವೆ ಎಂದು ಆರೋಪಿಸಿ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ, ರಾಷ್ಟ್ರ ರಾಜಧಾನಿ ಹೊಸದಿಲ್ಲಿಯಲ್ಲಿ ನಿರಂತರ ಪ್ರತಿಭಟನೆಗಳು ನಡೆಯುತ್ತಿವೆ. ಅಕ್ಟೋಬರ್ 12ರ ಮೆರವಣಿಗೆಯ ವಿರುದ್ಧ ಸಲ್ಲಿಕೆಯಾದ ಅರ್ಜಿಯೊಂದರ ಸಂಬಂಧ, ಸುಪ್ರೀಂ ಕೋರ್ಟ್ ಈಗಾಗಲೇ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ಕಾಂಗ್ರೆಸ್ ಪಕ್ಷ ಮತ್ತು ಇತರರಿಗೆ ನೋಟಿಸ್ ಜಾರಿ ಮಾಡಿದೆ. ಕಳೆದ ಅಕ್ಟೋಬರ್ 7 (ಬುಧವಾರ)ರಂದು ನಡೆದ ಮತ್ತೊಂದು ಪ್ರತಿಭಟನೆಯಲ್ಲಿ, ರಾಹುಲ್ ಗಾಂಧಿ ವಿರುದ್ಧ ಮಹಿಳಾ ಪೊಲೀಸ್ ಅಧಿಕಾರಿಯನ್ನು ತಳ್ಳಿದ ಆರೋಪ ಕೇಳಿಬಂದಿತ್ತು.

# ನ್ಯಾಯಾಲಯವನ್ನೇ ಬೆದರಿಸುತ್ತೀರಾ

## ಪ್ರತಿಪಕ್ಷಗಳ ಸುಪ್ರೀಂ ಕೋರ್ಟ್ ಚಲೋ ನಡೆಗೆ ಸೂರ್ಯಕಾಂತ್ ನೇತೃತ್ವದ ಪೀಠ ಬೇಸರ

**ದೆಹಲಿ:** ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ (ಎಸ್‌ಐಆರ್) ಭಾರಿ ಅಕ್ರಮ ನಡೆದಿದೆ, ಕೋಟ್ಯಂತರ ಮತದಾರರ ಹೆಸರನ್ನು ಅಳಿಸಿ ಹಾಕಲಾಗಿದೆ ಎಂದು ಆರೋಪಿಸಿ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಮತ್ತು ಪ್ರತಿಪಕ್ಷಗಳ ಇತರ 12 ನಾಯಕರು ಸಲ್ಲಿಸಿರುವ ಅರ್ಜಿಯನ್ನು ಸುಪ್ರೀ ಂಕೋರ್ಟ್ ಗುರುವಾರ(ಅ.15ರಂದು) ವಿಚಾರಣೆ ನಡೆಸಿತು.

**ಪ್ರತಿಪಕ್ಷಗಳ ಸುಪ್ರೀಂ ಕೋರ್ಟ್ ಚಲೋ ನಡೆಗೆ ಸಿಜೆಐ ಬೇಸರ:** ಇದೇ ವೇಳೆ, ಅ.12ರಂದು ಸುಪ್ರೀಂ ಕೋರ್ಟ್ ಚಲೋ ನಡೆಸಿದ ಪ್ರತಿಪಕ್ಷಗಳ ನಾಯಕರ ವರ್ತನೆಗೆ ಕಳವಳ ವ್ಯಕ್ತಪಡಿಸಿ ಸಲ್ಲಿಕೆಯಾದ ಅರ್ಜಿಗಳ ಪರ ಹಿರಿಯ ವಕೀಲ ಗೌರವ್ ಭಾಟಿಯಾ ವಾದ ಮಂಡಿಸಿದರು. ಈ ಅರ್ಜಿಯ ವಿಚಾರಣೆ ನಡೆಸಿದ ಸಿಜೆಐ ಸೂರ್ಯಕಾಂತ್ ನೇತೃತ್ವದ ಪೀಠವು, ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ , ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ , ತೃಣಮೂಲ ಕಾಂಗ್ರೆಸ್ ಸಂಸದೆ ಮಹುವಾ ಮೊಯಿತ್ರಾ ಅವರಿಗೆ ನೋಟಿಸ್ ಜಾರಿ ಮಾಡಿತು.

"ಪ್ರತಿಭಟನಾ ಮೆರವಣಿಗೆಯನ್ನು ಕೋರ್ಟ್ ಆವರಣದತ್ತ ತಂದ ಪ್ರತಿಪಕ್ಷಗಳ ನಾಯಕರ ಪೈಕಿ ಒಬ್ಬರ ವರ್ತನೆ ತೀವ್ರ ಬೇಸರ ತರಿಸಿದೆ," ಎಂದು ಅಸಮಾಧಾನ ವ್ಯಕ್ತಪಡಿಸಿದ ಸಿಜೆಐ ಸೂರ್ಯಕಾಂತ್ ಅವರು, "ಯಾರೂ ನ್ಯಾಯಾಲಯವನ್ನು ಬೆದರಿಸಲು ಸಾಧ್ಯವಿಲ್ಲ," ಎಂದು ಖಡಕ್ಕಾಗಿ ಹೇಳಿದರು. ನಿರ್ದಿಷ್ಟ ಅರ್ಜಿದಾರನ ಹೆಸರು ಉಲ್ಲೇಖಿಸದಿದ್ದರೂ ನ್ಯಾಯಪೀಠ, "ನಾವು ದಂತದ ಗೋಪುರಗಳಲ್ಲಿ ಕುಳಿತಿಲ್ಲ. ಅವರು ಹೊರಗೆ ಯಾವ ಹೇಳಿಕೆ ನೀಡುತ್ತಾರೆ, ನ್ಯಾಯಾಲಯದಲ್ಲಿ ಏನು ಹೇಳುತ್ತಾರೆ ಎಂಬುದು ನಮಗೆ ತಿಳಿದಿದೆ," ಎಂದು ಹೇಳಿತು.

ಎಸ್‌ಐಆರ್, ದೆಹಲಿ ಪ್ರತಿಭಟನೆಗಳು, ಸುಪ್ರೀಂ ಕೋರ್ಟ್‌ನತ್ತ ನಡೆದ ಪ್ರತಿಭಟನಾ ಮೆರವಣಿಗೆ ಹಾಗೂ ಪತ್ರಕರ್ತರು ಹಾಗೂ ವಕೀಲರ ಮೇಲಿನ ಹಲ್ಲೆ ಆರೋಪಗಳಿಗೆ ಸಂಬಂಧಿಸಿದ ವಿವಿಧ ಅರ್ಜಿಗಳ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಎಲ್ಲರ ವಾದವನ್ನೂ ಆಲಿಸಲಾಗುವುದು ಎಂದು ತಿಳಿಸಿದೆ.

ಇನ್ನು ಎಸ್‌ಐಆರ್ ಅಕ್ರಮಗಳ ಆರೋಪ ಸಂಬಂಧ ಎಐ–



### ಬೇಷರತ್ ಕ್ಷಮೆ ಕೋರಿದ ಗೃಹ ಕಾರ್ಯದರ್ಶಿ

ಕಾಕ್ರೋಚ್ ಜನತಾ ಪಾರ್ಟಿ ದೆಹಲಿಯ ಜಂತರ್‌ಮಂತರ್ ಪ್ರತಿಭಟನೆ ನಡೆಸುವ ಸಂಬಂಧ ಅ.10ರಂದು ಕರೆ ನೀಡಿದ್ದ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಮೆಟ್ರೋ, ರೈಲು ಸೇವೆಗಳ ಮೇಲೆ ಯಾವುದೇ 'ಸಂಪೂರ್ಣ ನಿಷೇಧ' ವಿಧಿಸದಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು. ಆದರೆ ಇದನ್ನು ಉಲ್ಲಂಘಿಸಿದ ಆರೋಪದ ಮೇಲಿನ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಬೇಷರತ್ ಕ್ಷಮೆ ಕೋರಿದರು. ನ್ಯಾಯಾಲಯಕ್ಕೆ ಸಲ್ಲಿಸಿದ ಅಫಿಡವಿಟ್‌ನಲ್ಲಿ "ನಮಗೆ ನ್ಯಾಯಾಂಗ ನಿಂದನೆ ಉದ್ದೇಶವಿರಲಿಲ್ಲ. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಹಾಗೂ ವದಂತಿಗಳನ್ನು ತಡೆಯಲು ಈ ಕ್ರಮ ಅನಿವಾರ್ಯವಾಗಿತ್ತು," ಎಂದು ತಿಳಿಸಲಾಗಿದೆ.

ಎಂಐಎಂ ಸಂಸದ ಅಸಾದುದ್ದಿನ್ ಓವೈಸಿ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಸಿಜೆಐ ಸೂರ್ಯಕಾಂತ್ ನೇತೃತ್ವದ ಪೀಠವು ಕೇಂದ್ರ ಸರ್ಕಾರ, ಚುನಾವಣಾ ಆಯೋಗ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ಇನ್ನಿಬ್ಬರು ಆಯುಕ್ತರಿಗೆ ನೋಟಿಸ್ ಜಾರಿ ಮಾಡಿ ವಿವರವಾದ ಪ್ರತಿಕ್ರಿಯೆ ಕೋರಿ ನೋಟಿಸ್ ಜಾರಿ ಮಾಡಿತು.

### ತಿರಂಗಾ ಮೆರವಣಿಗೆಯಲ್ಲಿ ಭಾಗವಹಿಸದಂತೆ ದೀಪ್ಕೆಗೆ ನೋಟಿಸ್

**ದೆಹಲಿ:** ತಿರಂಗಾ ಮೆರವಣಿಗೆ ನಡೆಸಲು ಸಜ್ಜಾಗುತ್ತಿದ್ದ ಸಿಜೆಪಿ ಸಂಸ್ಥಾಪಕ ಅಭಿಜೀತ್ ದೀಪ್ಕೆಗೆ ದೆಹಲಿ ಪೊಲೀಸರು ಶಾಕ್ ನೀಡಿದ್ದಾರೆ. ಪ್ರತಿಭಟನೆಯಲ್ಲಿ ಭಾಗವಹಿಸದಂತೆ ನೋಟಿಸ್ ಜಾರಿ ಮಾಡಿದ್ದಾರೆ.

ಶುಕ್ರವಾರ 'ಕಾಕ್ರೋಚ್ ಜನತಾ ಪಾರ್ಟಿ'ಯ ಸಂಸ್ಥಾಪಕ ಅಭಿಜೀತ್ ದೀಪ್ಕೆ ಅವರು ತಂಗಿದ್ದ ಎನ್‌ಸಿಪಿ–ಎಸ್‌ಸಿಪಿ (NCP-SCP) ವಕ್ತಾರ ಅನೀಶ್ ಗವಾಂಡೆ ಅವರ ನಿವಾಸಕ್ಕೆ ಆಗಮಿಸಿದ 20ಕ್ಕೂ ಹೆಚ್ಚು ಪೊಲೀಸರು, ಕನ್ನಾಟ್ ಪ್ಲೇಸ್‌ನಲ್ಲಿ ನಡೆಯಲಿರುವ ಪ್ರತಿಭಟನೆಯಲ್ಲಿ ಭಾಗವಹಿಸದಂತೆ ಅವರಿಗೆ ನೋಟಿಸ್ ನೀಡಿದ್ದಾರೆ. ಈ ಪ್ರತಿಭಟನಾ ಮೆರವಣಿಗೆ ಆರಂಭವಾಗಲು ಕೆಲವೇ ಗಂಟೆಗಳು ಇರುವಂತೆಯೇ ಈ ಕ್ರಮ ಕೈಗೊಳ್ಳಲಾಗಿದೆ.

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (BNSS) ಸೆಕ್ಷನ್ 163 ರ ಅಡಿಯಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದೆ ಎಂದು ದೀಪ್ಕೆಗೆ ನೀಡಲಾದ ನೋಟಿಸ್ ನಲ್ಲಿ ತಿಳಿಸಲಾಗಿದೆ. ಅಲ್ಲದೆ, ಈ ಮೆರವಣಿಗೆಗೆ ನವದೆಹಲಿ ಪುರಸಭೆ ಮಂಡಳಿ (NDMC) ಅನುಮತಿ ನೀಡಿಲ್ಲ. ಒಂದು ವೇಳೆ ಈ ಪ್ರತಿಭಟನೆಯನ್ನು ಮುಂದುವರಿಸಿದರೆ, ಅದು ನಿರ್ಬಂಧಗಳ ಉಲ್ಲಂಘನೆಯಾಗುತ್ತದೆ ಮತ್ತು ಕಾನೂನು ಕ್ರಮಕ್ಕೆ ಎಡೆಮಾಡಿಕೊಡುತ್ತದೆ ಎಂದು ದೆಹಲಿ ಪೊಲೀಸ್ ಮೂಲಗಳು ತಿಳಿಸಿವೆ.

'ತಿರಂಗ ಯಾತ್ರೆ'ಗೆ ಮುನ್ನ ಪೊಲೀಸರು ತಮ್ಮ ನಿವಾಸಕ್ಕೆ ಆಗಮಿಸಿದಾಗ ಪ್ರತಿಕ್ರಿಯಿಸಿದ ಎನ್‌ಸಿಪಿ–ಎಸ್‌ಸಿಪಿ (NCP-SCP) ವಕ್ತಾರ ಅನೀಶ್ ಗವಾಂಡೆ, "ನಾನು ಊಟಕ್ಕೆ ಹೊರಗೆ ಹೋಗಿದ್ದೆ, ಹಿಂತಿರುಗಿ ಬರುವಷ್ಟರಲ್ಲಿ ದೆಹಲಿ ಪೊಲೀಸರು ನನ್ನ ನಿವಾಸಕ್ಕೆ ಬಂದಿರುವುದು ತಿಳಿಯಿತು. ಇಲ್ಲಿ ಸಿಜೆಪಿ (CJP) ಸಂಸ್ಥಾಪಕ ಅಭಿಜೀತ್ ಡಿಪ್ಕೆ ಕೂಡ ತಂಗಿದ್ದಾರೆ. ಅವರು ನಮ್ಮ ಅತಿಥಿಗಳು; ನಾನು ಅವರಿಗೆ ಚಹಾ ನೀಡಿ, ಅವರು ಇಲ್ಲಿಗೆ ಏಕೆ ಬಂದಿದ್ದಾರೆ ಎಂದು ಕೇಳುತ್ತೇನೆ. ಮೊದಲು ಆ ನೋಟಿಸ್ ಓದಿಕೊಳ್ಳಲಿ. ನಾವೆಲ್ಲರೂ 'ತಿರಂಗ ಯಾತ್ರೆ'ಯಲ್ಲಿ ಭಾಗವಹಿಸಬೇಕು, ನಾವು ಖಂಡಿತ ಹೋಗುತ್ತೇವೆ ಎಂದು ಹೇಳಿದರು.

'ತಿರಂಗ ಯಾತ್ರೆ'ಯಲ್ಲಿ ಭಾಗವಹಿಸುತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, "ಖಂಡಿತವಾಗಿಯೂ. ನಾವೆಲ್ಲರೂ 'ತಿರಂಗ ಯಾತ್ರೆ'ಯಲ್ಲಿ ಭಾಗವಹಿಸುತ್ತೇವೆ ಎಂದರು.



### ಕೈಯಲ್ಲಿ ಮೈಕ್ ಹಿಡಿದು, ರೀಲ್ಸ್ ಮಾಡೋರೆಲ್ಲ ಜರ್ನಲಿಸ್ಟ್ ಆಗೋಕೆ ಸಾಧ್ಯವೇ: ಸುಪ್ರೀಂ ಪ್ರಶ್ನೆ

**ದೆಹಲಿ:** ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠವು ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಡಿಜಿಟಲ್ ಯುಗದ ಪತ್ರಿಕೋದ್ಯಮದ ಗಡಿಗಳ ಕುರಿತು ಅತ್ಯಂತ ಮಹತ್ವದ ಮೌಖಿಕ ಅವಲೋಕನವನ್ನು ಮಾಡಿದ್ದು, ದೇಶದ ಪ್ರತಿಯೊಬ್ಬ ನಾಗರಿಕನೂ ಕೇವಲ ಮೊಬೈಲ್ ಫೋನ್ ಹಿಡಿದುಕೊಂಡು ತಾನು ಪತ್ರಕರ್ತ ಎಂದು ಹೇಳಿಕೊಳ್ಳಲು ಆರಂಭಿಸಿದರೆ, ಅದು ಎಲ್ಲರಿಗೂ ದೊಡ್ಡ ಸಮಸ್ಯೆಯನ್ನು ಸೃಷ್ಟಿಸಬಹುದು ಎಂದು ಕಳವಳ ವ್ಯಕ್ತಪಡಿಸಿದೆ.

**ಸುಪ್ರೀಂ ಕೋರ್ಟ್ ಪೀಠ ಹೇಳಿದ್ದೇನು?:** ದೆಹಲಿಯ ಜಂತರ್ ಮಂತರ್ ಪ್ರತಿಭಟನೆಗಳ ಪ್ರತಿಭಟನೆಗಳ ವರದಿಗಾರಿಕೆ ವೇಳೆ ಸ್ವತಂತ್ರ ಹಾಗೂ ಫ್ರೀಲ್ಯಾನ್ಸ್ ಪತ್ರಕರ್ತರಿಗೆ ಪೊಲೀಸ್ ಕಿರುಕುಳವಾಗುತ್ತಿದೆ ಎಂದು ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆ ನಡೆಸುವಾಗ, ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲಾ ಬಾಗ್ಚಿ ಅವರನ್ನೊಳಗೊಂಡ ಪೀಠವು, ಸಂವಿಧಾನದ 19(1)(ಚಿ) ವಿಧಿ ಅಡಿಯಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಲಭ್ಯವಿರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಳಸಿಕೊಂಡು ದೇಶದ ಪ್ರತಿಯೊಬ್ಬ ನಾಗರಿಕನೂ ತಾನು ಪತ್ರಕರ್ತ ಎಂದು ಹೇಳಿಕೊಳ್ಳಲು ಸಾಧ್ಯವೇ ಎಂಬುದನ್ನು ಆಳವಾಗಿ ಪರಿಶೀಲಿಸಬೇಕಿದೆ ಎಂದು ಹೇಳಿದೆ. ಜೊತೆಗೆ, ಎಲ್ಲರೂ ಪತ್ರಕರ್ತರಾಗಲು ಹೊರಟರೆ ವ್ಯವಸ್ಥೆಯಲ್ಲಿ ಭಾರಿ ಸಮಸ್ಯೆ ಸೃಷ್ಟಿಯಾಗುತ್ತದೆ ಎಂದು ಪೀಠ ಎಚ್ಚರಿಸಿದೆ.

ಮುಂದುವರೆದು, ಮಾನ್ಯತೆ ಪಡೆದ ಪತ್ರಕರ್ತರು, ನೋಂದಾಯಿತ ಮಾಧ್ಯಮ ಸಂಸ್ಥೆಗಳಲ್ಲಿ ಕೆಲಸ ಮಾಡುವವರು, ಸ್ವತಂತ್ರ ಪತ್ರಕರ್ತರು ಹಾಗೂ ಕೇವಲ ಸಾಮಾಜಿಕ ಜಾಲತಾಣಗಳ ಇನ್‌ಫ್ಲುಯೆನ್ಸರ್ ಅಥವಾ ರೀಲ್ಸ್ ಮಾಡುವವರ ನಡುವೆ ಸ್ಪಷ್ಟವಾದ ವ್ಯತ್ಯಾಸಗಳು ಮತ್ತು ರಕ್ಷಣೆಯ ಹಂತಗಳಿವೆ ಎಂದು ಅಭಿಪ್ರಾಯಪಟ್ಟ ಜಸ್ಟಿಸ್ ಬಾಗ್ಚಿ, ದುಡಿಯುವ ಪತ್ರಕರ್ತರ ಕಾಯ್ದೆಯಲ್ಲಿ ಪತ್ರಕರ್ತರಲ್ಲಿ ಕೆಲವು ವರ್ಗಗಳನ್ನು ಮಾಡಿದೆ, ಇದರ ಸಂಪೂರ್ಣ ಆಳವಾದ ಪರಿಶೀಲನೆ ಅಗತ್ಯವಿದೆ ಎಂದು ತಿಳಿಸಿದರು.

### ಚುನಾಯಿತರಾಗಲು ಸಾಧ್ಯವಾಗದ ರಾಜಕುಮಾರನಿಗೆ ಚಕ್ರವರ್ತಿಯಾಗುವ ಕನಸು

#### ರಾಹುಲ್ ಗಾಂಧಿ ವಿರುದ್ಧ ಸ್ಮೃತಿ ಇರಾನಿ ಟೀಕೆ

**ದೆಹಲಿ:** ಭಾರತೀಯ ಚುನಾವಣಾ ಆಯೋಗದ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮತ್ತು ಮಾಜಿ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು ಗುರುವಾರ ತೀವ್ರ ವಾಗ್ದಾಳಿ ನಡೆಸಿದ್ದಾರೆ.



ಅವರನ್ನು "ಚುನಾಯಿತರಾಗಲು ಸಾಧ್ಯವಾಗದ ರಾಜಕುಮಾರ" ಎಂದು ಕರೆದಿರುವ ಸ್ಮೃತಿ, ರಾಹುಲ್ ಗಾಂಧಿ ಚಕ್ರವರ್ತಿಯಾಗುವ ಕನಸು ಕಾಣುತ್ತಿದ್ದಾರೆ ಎಂದು ಟೀಕಿಸಿದ್ದಾರೆ. ಗಾಂಧಿಯವರ ಈ ನಡೆಯನ್ನು "ರಾಜಕೀಯ ತಂತ್ರ" ಎಂದಿದ್ದಾರೆ. ಚುನಾವಣೆಗಳ ಮೂಲಕವಲ್ಲದೆ ಬೇರೆ ಮಾರ್ಗದಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವನ್ನು ಉಚ್ಚಾಟಿಸಲು ಕಾಂಗ್ರೆಸ್ ಸಂಸದರು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಕಾಂಗ್ರೆಸ್ ನಾಯಕ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಯವವರು ಈ ದೇಶವನ್ನು ಆಳುವುದು ತಮ್ಮ ಜನ್ಮಸಿದ್ಧ ಹಕ್ಕು ಎಂದು ಭಾವಿಸಿದ್ದಾರೆ. ಅದನ್ನು ಈಡೇರಿಸಿಕೊಳ್ಳಲು ಅವರು ಕಾನೂನನ್ನು ಉಲ್ಲಂಘಿಸಬಹುದೇ? ಹಿಂಸಾಚಾರವನ್ನು ಪ್ರಚೋದಿಸಬಹುದೇ? ಎಂದು ಪ್ರಶ್ನಿಸಿದ್ದಾರೆ.

ಸಿಇಸಿ ಜ್ಞಾನೇಶ್ ಕುಮಾರ್ ಮತ್ತು ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆಯ ವಿರುದ್ಧ ವಿರೋಧ ಪಕ್ಷದ ಪ್ರತಿಭಟನೆಗಳ ಕುರಿತು ಎನ್‌ಡಿಎಟಿ ಸಂದರ್ಶನದಲ್ಲಿ ಮಾತನಾಡಿರುವ ಅವರು, ರಾಹುಲ್ ಗಾಂಧಿ ಸರ್ಕಾರದೊಂದಿಗೆ ಮಾತನಾಡಲು ಬಯಸುವುದಿಲ್ಲ. ಬದಲಾಗಿ ಮೊಬಾಕ್ರಸಿ(ಜನಸಮೂಹದ) ಮೂಲಕ ಆಡಳಿತವನ್ನೇ ಬದಲಾಯಿಸಲು ಬಯಸುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ.

### 6ನೇ ಮಹಡಿಯಿಂದ ಬಿದ್ದು ವಿದ್ಯಾರ್ಥಿನಿ ಆತ್ಮಹತ್ಯೆ

**ಬೆಂಗಳೂರು:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನ ನಾಗದೇನಹಳ್ಳಿ ಸಮೀಪ ಗುರುವಾರ ರಾತ್ರಿ ಘೋರ ದುರಂತವೊಂದು ನಡೆದಿದ್ದು, ಹಾಸ್ಟೆಲ್ ಕಟ್ಟಡದ ಆರನೇ ಮಹಡಿಯಿಂದ ಬಿದ್ದು 20 ವರ್ಷದ ವಿದ್ಯಾರ್ಥಿನಿಯೊಬ್ಬಳು ಮೃತಪಟ್ಟಿದ್ದಾರೆ.

ಮೃತ ವಿದ್ಯಾರ್ಥಿನಿಯನ್ನು ಆಂಧ್ರ ಪ್ರದೇಶದ ಗುಂತಕಲ್ ಮೂಲದ ವರ್ಷಿತಾ(20) ಎಂದು ಗುರುತಿಸಲಾಗಿದೆ. ವರ್ಷಿತಾ ಗೀತಂ ವಿಶ್ವವಿದ್ಯಾಲಯದಲ್ಲಿ ಮೂರನೇ ವರ್ಷದ ಬಿಟೆಕ್ ಕಂಪ್ಯೂಟರ್ ಸೈನ್ಸ್ ವ್ಯಾಸಂಗ ಮಾಡುತ್ತಿದ್ದರು.

**ಪೋಷಕರಿಗೆ ಕೊನೆಯ ಸಂದೇಶ:** ವಿದ್ಯಾರ್ಥಿನಿ ಸಾವಿಗೂ ಮುನ್ನ ತನ್ನ ತಂದೆ ಹಾಗೂ ತಾಯಿಗೆ ಫೋನ್‌ನಲ್ಲಿ ಕೊನೆಯ ಸಂದೇಶ ಕಳುಹಿಸಿರುವ ಮಾಹಿತಿ ಲಭ್ಯವಾಗಿದೆ. 'I Love You Dad, I Love You Mom' ಎಂದು ಪೋಷಕರಿಗೆ ಸಂದೇಶ ಕಳುಹಿಸಿದ್ದಾಗಿ ತಿಳಿದುಬಂದಿದೆ.

ಉತ್ತರ ಕರ್ನಾಟಕ ಸುದ್ದಿಗಳು
ಕನ್ನಡ ದಿನ ಪತ್ರಿಕೆ
UTTARA KARNATKA SUDDIGALU
Kannada Daily Morning


ಭಾಗ್ಯ ಹಾಗೂ ರಮಾ ಚಿಗಟೇರಿ, ಗದಗ


ಭಾವನಾ ಅನಿಲಕುಮಾರ ಆತಡಕರ ಶಿಗ್ಗಿ


ಶ್ರೀ ಬಸವೇಶ್ವರ ಮಹಿಳಾ ಮಂಡಳ ಶಿವಾನಂದ ನಗರ ರೋಣ


ಮಂಜುಳಾ ಗುಂಡಮಿ ಶಿಗ್ಗಿ


ಸಹನಾ ಹಿರೇಮಠ್ ಗಂಗಾವತಿ


ಎಂ.ಟಿ. ಅವಧೂತ, ಸಹೋದರಿಯರು ಗಜೇಂದ್ರಗಡ


ಸುಮಾ ಹಿರೇಮಠ


ಅನುಶ್ರೀ. ಅವಧೂತ ಗೆಳತಿಯರು, ಗೋೇರಿ


ಜ್ಯೋತಿ ಹಾಗೂ ಗೆಳತಿಯರು, ಧಾರವಾಡ


ಈರಮ್ಮ ಹಾಗೂ ಸಂಗಡಿಗರು ಗಂಗಾವತಿ


ಜಯಶ್ರೀ ಸಂಗಡಿಗರು ರೋಣ


ಬನಶ್ರೀ.ವಿ.ಎಸ್.ಯಲಬುರ್ಗಾ


ವಿಶಾಲಾಕ್ಷಿ ಶಿವಪ್ಪಯ್ಯನಮಠ ಯಲಬುರ್ಗಾ


ರಾಜೀವ ಗಾಂಧಿ ಆಯುರ್ವೇದಿಕ್ ಮಹಾವಿದ್ಯಾಲಯ ಸಿಬ್ಬಂದಿ ರೋಣ


ಸುವರ್ಣ ಸಂಗಡಿಗರು ರೋಣ


ಶ್ರೀ ಸಿದ್ಧಾರೂಢ ಮಹಿಳಾ ಭಜನಾ ಸಂಘ ರೋಣ


ಕೃಷಿ ಇಲಾಖೆ ಅಧಿಕಾರಿ ಹಾಗೂ ಸಿಬ್ಬಂದಿಗಳು. ಗದಗ


ಅನುರಾಧ ಶಿರಗುಪ್ಪಿ ರಬಕವಿ


ಕವಿತಾ ಸಂಗಡಿಗರು ಧಾರವಾಡ


ಶ್ರೀಶಾ ಪ್ರಭನ್ನವರ ಬಾಗಲಕೋಟ


ಮಲ್ಲಮ್ಮ ಸಂಗಡಿಗರು ಬರಗೂರು,ಗಂಗಾವತಿ

UTTARA KARNATKA SUDDIGALU
Kannada Daily Morning

ಉತ್ತರ ಕರ್ನಾಟಕ ಸುದ್ದಿಗಳು
ಕನ್ನಡ ದಿನ ಪತ್ರಿಕೆ

ಶನಿವಾರ 17 ಅಕ್ಟೋಬರ್ 2026
17 OCTOBER 2026



# ಕೊಳಚೆ ನೀರಿನ ಕೆರೆಯಂತಾದ ನವಲಗುಂದ ಬಸ್ ನಿಲ್ದಾಣ



**ನವಲಗುಂದ:** ಇಲ್ಲಿಯ ಬಸ್ ನಿಲ್ದಾಣದ ಅವ್ಯವಸ್ಥೆ ಬಯಲು: ಕೊಳಚೆ ನೀರಿನ ಮೇಲೆಯೇ ಜನರ ಓಡಾಟ! ನವಲಗುಂದ ಪಟ್ಟಣದ ಪ್ರಮುಖ ಸಾರಿಗೆ ಕೇಂದ್ರವಾದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣವು ಸದ್ಯ ಕೊಳಚೆ ನೀರಿನ ಕೆರೆಯಾಗಿ ಮಾರ್ಪಟ್ಟಿದೆ. ಬಸ್ ನಿಲ್ದಾಣದ ಆವರಣ ಮತ್ತು ಮುಖ್ಯ ರಸ್ತೆಯ ಮೇಲೆ ಕೊಳಚೆ ನೀರು ರಭಸವಾಗಿ ಹರಿಯುತ್ತಿದ್ದು, ನೂರಾರು ಪ್ರಯಾಣಿಕರು ಅದೇ ಕೊಳಚೆಯ ಮೇಲೆಯೇ ನಡೆದಾಡುವ ದುಸ್ಥಿತಿ ಎದುರಾಗಿದೆ.

ಕಳೆದ ಮೂರು ತಿಂಗಳಿಂದ ಈ ಸಮಸ್ಯೆ ಇದ್ದರೂ ಬಸ್ ನಿಲ್ದಾಣದ ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿದ್ದಾರೆ ಎಂದುಸಾರ್ವಜನಿಕರುಆರೋಪಿಸಿದ್ದಾರೆ.ಚರಂಡಿಯಲ್ಲಿ ಕಸ, ಪ್ಲಾಸ್ಟಿಕ್ ತುಂಬಿಕೊಂಡು ನೀರು ಸರಾಗವಾಗಿ ಹರಿಯದಂತಾಗಿದೆ. ಜೊತೆಗೆ ಚರಂಡಿ ಮೇಲಿನ ಪೈಪ್ ಲೈನ್ ನಿಂದ ಹೊರಬರುವ ತ್ಯಾಜ್ಯ ನೀರು ನೇರವಾಗಿ ರಸ್ತೆಗೆ ಹರಿದು ಬರುತ್ತಿದೆ.

ಪ್ರತಿದಿನ ಹುಬ್ಬಳ್ಳಿ,ಧಾರವಾಡ,ಗದಗ,ರೋಣ,ನರಗುಂದ ಮಾರ್ಗದ ನೂರಾರು ಬಸ್ ಗಳು ಇಲ್ಲಿ ಸಂಚರಿಸುತ್ತವೆ. ಶಾಲಾ-ಕಾಲೇಜು ವಿದ್ಯಾರ್ಥಿಗಳು, ಮಹಿಳೆಯರು, ವಯೋವೃದ್ಧರು ಇದೇ ಕೊಳಚೆಯನ್ನು ದಾಟಿ ಬಸ್ ಹತ್ತಬೇಕಿದೆ. ಬಸ್ ಚಲಿಸುವಾಗ ಕೊಳಚೆ ನೀರು ಚಿಮ್ಮಿ ಬಟ್ಟೆಗೆ ಬೀಳುತ್ತಿದೆ. ದುರ್ವಾಸನೆಯಿಂದ ಬಸ್ ನಿಲ್ದಾಣದಲ್ಲಿ ನಿಲ್ಲುವುದೇ ಸಾರ್ವಜನಿಕರಿಗೆ ಕಷ್ಟವಾಗಿದೆ. ಕೊಳಚೆ ನೀರು ನಿಲ್ಲುವುದರಿಂದ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗಿ ಡೆಂಗ್ಯೂ, ಮಲೇರಿಯಾ, ಚರ್ಮರೋಗ ಹರಡುವ ಭೀತಿ ಎದುರಾಗಿದೆ. ಬಸ್ ನಿಲ್ದಾಣದಲ್ಲಿರುವ ಆಹಾರ ಮಳಿಗೆಗಳ ಪಕ್ಕದಲ್ಲೇ ಕೊಳಚೆ ಹರಿಯುತ್ತಿರುವುದರಿಂದ ಸಾರ್ವಜನಿಕರ ಆರೋಗ್ಯದ ಬಗ್ಗೆ ಆತಂಕ ವ್ಯಕ್ತವಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಚರಂಡಿ ಸ್ವಚ್ಛಗೊಳಿಸಿ, ಪೈಪ್ ಲೈನ್ ದುರಸ್ತಿ ಮಾಡಿ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ



# ನಾಲ್ಕು ಪದವೀಧರ ಕ್ಷೇತ್ರದಲ್ಲೂ ಬಿಜೆಪಿಗೆ ಭರ್ಜರಿ ಗೆಲುವು: ಜೋಶಿ ವಿಶ್ವಾಸ

**ಗದಗ:** ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ದೊಡ್ಡ ಮಟ್ಟದ ಅಸಮಾಧಾನವಿದ್ದು, ನಾಲ್ಕು ಪದವೀಧರ ಕ್ಷೇತ್ರಗಳ ಚುನಾವಣೆಯಲ್ಲಿ ಬಿಜೆಪಿ ದೊಡ್ಡ ಪ್ರಮಾಣದಲ್ಲಿ ಗೆಲುವು ಸಾಧಿಸಲಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಹಾಗೂ ಸರ್ಕಾರದ ನಡುವಳಿಕೆಯನ್ನು ನೋಡಿ ಜನರು ರೋಸಿ ಹೋಗಿದ್ದು, ವಾಕರಿಕೆ ಬಂದಂತಾಗಿದೆ ಎಂದು ಟೀಕಿಸಿದರು.

ರಾಜ್ಯದಲ್ಲಿ ತೀವ್ರ ಬರಗಾಲವಿದ್ದು, ಕುಡಿಯುವ ನೀರಿನ ಸಮಸ್ಯೆ, ರೈತರಿಗೆ ಹಾಗೂ ಜನಸಾಮಾನ್ಯರಿಗೆ ಸಮರ್ಪಕ ವಿದ್ಯುತ್ ಇಲ್ಲದೆ ಹಳ್ಳಿಗಳಲ್ಲಿ ಪವರ್ ಕಟ್ ಹೆಚ್ಚಾಗಿದೆ. ದೇಶದಲ್ಲಿ ವಿದ್ಯುತ್ ಉತ್ಪಾದನೆ ಇದ್ದರೂ, ವಿದ್ಯುತ್ ಖರೀದಿ ಮಾಡದ ಅಯೋಗ್ಯ ಸರ್ಕಾರ ಇದಾಗಿದೆ ಎಂದು ಕಿಡಿಕಾರಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ರೈತರಿಗೆ ಹೆಚ್ಚಿನ ಪರಿಹಾರ ನೀಡಲಾಗಿತ್ತು. ಯಡಿಯೂರಪ್ಪ ಮತ್ತು ಬೊಮ್ಮಾಯಿ ಸರ್ಕಾರದಲ್ಲಿ ಒಣ ಬೇಸಾಯಿಗೆ ಹೆಕ್ಟೇರ್‌ಗೆ 13 ಸಾವಿರ ಹಾಗೂ ನೀರಾವರಿ ಬೆಳೆಗೆ 25 ಸಾವಿರ ರೂ. ಪರಿಹಾರ ನೀಡಲಾಗಿತ್ತು. ಆದರೆ ಈಗ ಕಾಂಗ್ರೆಸ್ ಸರ್ಕಾರ ಪ್ರತಿ ಕುಟುಂಬಕ್ಕೆ ಕೇವಲ 2500 ರೂ. ನೀಡುತ್ತಿದೆ ಎಂದು ಆರೋಪಿಸಿದರು.

ಬರವನ್ನು ಮರೆಮಾಚಲು ಕಾಂಗ್ರೆಸ್ ಸರ್ಕಾರ ಸ್ಟಿಂಗ್ ಡ್ರಾಮಾ ನಡೆಸುತ್ತಿದೆ.ಕಾಂಗ್ರೆಸ್‌ಪಕ್ಷನೈತಿಕಅಧಃಪತನಕ್ಕೆಇಳಿದಿದೆ.ಇದುನಿರ್ಲಜ್ಜ, ನೀತಿಗೆಟ್ಟ, ಬೇಜವಾಬ್ದಾರಿ ಸರ್ಕಾರವಾಗಿದೆ. ಸಿದ್ದರಾಮಯ್ಯನವರೇ




ಮಾಡಿದ್ದಾರೆ ಎಂದು ನಾವು ಹೇಳುತ್ತಿಲ್ಲ, ತನಿಖೆಯಾಗಲಿ. ಮಾತೆತ್ತಿದರೆ ಎಸ್ ಐ ಟಿ ತನಿಖೆ ಎನ್ನುತ್ತಿದ್ದವರು, ಈಗ ಈ ಪ್ರಕರಣದಲ್ಲೂ ಎಸ್ ಐಟಿ ತನಿಖೆ ಮಾಡಲಿ ಎಂದು ಒತ್ತಾಯಿಸಿದರು.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಸುಳ್ಳು ಆರೋಪ ಮಾಡಲಾಗುತ್ತಿದೆ. ಮಾಧ್ಯಮಗಳಲ್ಲಿ ಬೆಳಗಾಗುವುದರೊಳಗೆ ಸ್ಟಿಂಗ್ ಆಪರೇಷನ್ ಸುದ್ದಿ ಹಬ್ಬಿಸಲಾಗುತ್ತಿದೆ. ಋಋಋ ರಚಿಸಿ ತನಿಖೆ ನಡೆಸಲಿ, ಸತ್ಯ ಹೊರಬರಲಿ. ಕುಮಾರಸ್ವಾಮಿ ಅವರಿಗೆ ನಾಲ್ಕನೇ ಬಾರಿ ಹಾರ್ಟ್ ಓಪನ್ ಸರ್ಜರಿಯಾಗಿದೆ, ಕನಿಷ್ಠ ಸೌಜನ್ಯವೂ ಬೇಡವೇ? ಮತ್ತೊಬ್ಬರ ಸಾವು ಬಯಸುವುದು ಭಾರತೀಯ ಸಂಸ್ಕೃತಿಯೂ ಅಲ್ಲ, ಮನುಷ್ಯ ಸಂಸ್ಕೃತಿಯೂ ಅಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಜನರಿಂದ ಹಣ ವಸೂಲಿ ಮಾಡಿ ಗ್ಯಾರಂಟಿ ಯೋಜನೆಗಳನ್ನು ನೀಡಲಾಗುತ್ತಿದೆ. ಹಾಲು, ಡೀಸೆಲ್, ಸಾರಿಗೆ, ಜನನ ಮತ್ತು ಮರಣ ಪ್ರಮಾಣಪತ್ರ ಸೇರಿದಂತೆ ಎಲ್ಲದರ ದರವನ್ನು ಏರಿಕೆ ಮಾಡಲಾಗಿದೆ. ಸಾರಿಗೆ ಇಲಾಖೆ ನಷ್ಟದಲ್ಲಿದ್ದು, ಬಸ್‌ಗಳಿಗೆ ಟೈರ್ ಹಾಕಲು ಹಣವಿಲ್ಲ, ಸ್ಟೆಪ್ನಿಯೂ ಇಲ್ಲದಂತಾಗಿದೆ. ಇದು ರಾಜ್ಯದ ದುರ್ದೈವ ಎಂದು ಲೇವಡಿ ಮಾಡಿದರು.

ದೇಶದ್ರೋಹಿಗಳಿಗೆ ಕಾಂಗ್ರೆಸ್ ಬೆಂಬಲ ನೀಡುತ್ತಿದೆ. ವಿದ್ಯಾರ್ಥಿ ಯೂನಿಯನ್ ಲೀಡರ್ ನೇಹಾ ಎಂಬ ಯುವತಿ ಬಾಂಗ್ಲಾದೇಶ ಒಳ್ಳೆಯದು ಎನ್ನುತ್ತಾರೆ, ಅಲ್ಲಿ ಹಿಂದೂಗಳ ಮೇಲೆ ನಿರಂತರ ಹಲ್ಲೆ ನಡೆಯುತ್ತಿದ್ದರೂ ಅಂತಹ ಸರ್ಕಾರ ಇವರಿಗೆ ಒಳ್ಳೆಯದೇ ಎಂದು ಪ್ರಶ್ನಿಸಿದರು.

ಭಾರತದ ರಕ್ತದಲ್ಲೇ, ಡಿಎನ್‌ಎ ನಲ್ಲೇ ಪ್ರಜಾಪ್ರಭುತ್ವವಿದೆ. ಕಾಂಗ್ರೆಸ್ ಬಂದ ನಂತರವೇ ಪ್ರಜಾಪ್ರಭುತ್ವ ಬಂದಿಲ್ಲ. ಕಾಂಗ್ರೆಸ್ ಪಕ್ಷ ಮಣ್ಣು ಮುಕ್ಕಿಸಿದವರ ಜೊತೆಯಲ್ಲೇ, ಬಾಯಲ್ಲಿ ಮಣ್ಣು ಹಾಕಿದವರ ಜೊತೆಯಲ್ಲೇ ದೋಸ್ತಿ ಮಾಡಿಕೊಂಡಿದೆ ಎಂದು ಎನ್ ಸಿ ಪಿ ,ಆರ್ ಜೆ ಡಿ ತೃಣಮೂಲ ಕಾಂಗ್ರೆಸ್, ಸಮಾಜವಾದಿ ಪಕ್ಷಗಳನ್ನು ಉದ್ದೇಶಿಸಿ ಟೀಕಿಸಿದರು. ಈ ಸಂಧರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ,ಮಾಜಿ ಸಚಿವ ಶಾಸಕ ಸಿಸಿ ಪಾಟೀಲ,ರವಿ ದಂಡಿನ,ಎಂ ಎಂ ಹಿರೇಮಠ, ರಾಜು ಕುರಡಗಿ, ಸೇರಿದಂತೆ ಹಲವರು ಹಾಜರಿದ್ದರು.

## ಬಿಜೆಪಿ ಕಾರ್ಯಕರ್ತರ ಉಚ್ಚಾಟನೆ ಖಂಡಿಸಿ ಪ್ರತಿಭಟನೆ

### ಉಚ್ಚಾಟನೆ ಹಿಂಪಡೆಯದಿದ್ದರೆ ಉಗ್ರ ಹೋರಾಟದ ಎಚ್ಚರಿಕೆ

**ಗಜೇಂದ್ರಗಡ:** ಭಾರತೀಯ ಜನತಾ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾದ ಉಮೇಶ ಚನ್ನು ಪಾಟೀಲ ಹಾಗೂ ಶಿವಕುಮಾರ ದೊಡ್ಡೂರ ಅವರನ್ನು ಪಕ್ಷದಿಂದ ಉಚ್ಚಾಟಿಸಿರುವುದನ್ನು ಖಂಡಿಸಿ, ಚನ್ನು ಪಾಟೀಲ ಅಭಿಮಾನಿ ಬಳಗದ ವತಿಯಿಂದ ಪಟ್ಟಣದ ಕಾಲಕಾಲೇಶ್ವರ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಮಾತನಾಡಿದ ಶಿವಕುಮಾರ ದೊಡ್ಡೂರ, ಉಮೇಶ ಚನ್ನು ಪಾಟೀಲ ಅವರು ಪಕ್ಷಕ್ಕಾಗಿ ಹಗಲಿರುಳು ಶ್ರಮಿಸಿದ್ದಾರೆ. ಅವರ ಕುಟುಂಬವೂ ಕಳೆದ 30 ವರ್ಷಗಳಿಂದ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಂಡಿದೆ. ಇಂತಹ ಕಾರ್ಯಕರ್ತರನ್ನು ಯಾವುದೇ ನೋಟಿಸ್ ನೀಡದೆ ಪಕ್ಷದಿಂದ ಉಚ್ಚಾಟಿಸಿರುವುದು ಸರಿಯಲ್ಲ. ಉಚ್ಚಾಟನೆನಿರ್ಧಾರವನ್ನುಕೂಡಲೇ ಹಿಂಪಡೆಯಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಶಿವಕುಮಾರ ದೊಡ್ಡೂರ, ಅರುಣಕುಮಾರ ಮಠದ, ಸಂಗಯ್ಯ ಹಿರೇಮಠ, ಶೇಖರಗೌಡ ಪಾಟೀಲ, ಕುಮಾರ ಸ್ಟ್ಯಾಂಪಿನ್, ಮಲ್ಲಪ್ಪ ಪಲ್ಲೇದ, ಸಿದ್ದಯ್ಯ ಕಾರಡಗಿಮಠ, ಎ.ಎಫ್. ಪಾಯಪ್ಪಗೌಡರ, ರಾಘವೇಂದ್ರ ಕಾರಡಗಿಮಠ, ಮೌನೇಶ ಬಡಿಗೇರ, ಬಸವರಾಜ ಮಳಗಿ, ಪರಸಪ್ಪ ಕುಂಕದ, ರವಿ ಕೋಣನ್ನವರ, ಪ್ರಕಾಶಗೌಡ ಪಾಟೀಲ, ಶೇಖಪ್ಪ ಅಸುಟಿ, ಮಂಜುನಾಥ ಜಾಲಿಹಾಳ, ಸಂತೋಷ ಹೊಸಮಠ, ಗಿರಿಮಲ್ಲಯ್ಯ ಬೀಳಗಿ, ಹನುಮಂತ ಬಾಲಣ್ಣವರ, ಕಳಕಯ್ಯ ಕಾರಡಗಿಮಠ ಸೇರಿದಂತೆ ಬಿಜೆಪಿ ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು.




## ಸಂಕನೂರ ಅವರನ್ನು ಗೆಲ್ಲಿಸುವ ಮೂಲಕ ಹೊಸ ಇತಿಹಾಸ ಸೃಷ್ಟಿಸೋಣ: ಮುನೇನಕೊಪ್ಪ

**ನವಲಗುಂದ:** ಪಶ್ಚಿಮ ಪದವೀಧರ ಕ್ಷೇತ್ರದ ಅಭ್ಯರ್ಥಿ ಎಸ್.ವಿ. ಸಂಕನೂರ ಅವರನ್ನು ಗೆಲ್ಲಿಸುವ ಮೂಲಕ ಹೊಸ ಇತಿಹಾಸ ಸೃಷ್ಟಿಸಬೇಕು ಎಂದು ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಕರೆ ನೀಡಿದರು.

ನವಲಗುಂದ ತಾಲೂಕಿನ ತೀರ್ಲಾಪುರ ಗ್ರಾಮದಲ್ಲಿ ಮತದಾರರನ್ನು ಭೇಟಿ ಮಾಡಿ ಮಾತನಾಡಿದ ಅವರು, ಸಂಕನೂರ ಅವರನ್ನು ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮುತ್ತಣ್ಣ ಮನಮಿ, ಅಂದಾನಯ್ಯ ಹಿರೇಮಠ, ಸಿದ್ಧಲಿಂಗಪ್ಪ ಮದ್ನೂರ, ಶೇಖಣ್ಣ ಬಕ್ಕಣ್ಣನವರ, ಜಗದೀಶ್ ಮೆಣಸಿನಕಾಯಿ,ಚೆನ್ನರೆಡ್ಡಿವೀರಡ್ಡಿ,ವೀರಪ್ಪಕೊಪ್ಪದ,ಸಿದ್ಧಲಿಂಗಪ್ಪ ಕುಂದಗೋಳ, ರೋಹಿತ ಮತ್ತಿಹಳ್ಳಿ, ಸಿದ್ಧಪ್ಪ ಮರಿಸಿದ್ಧಪ್ಪನವರ, ಯಶವಂತಗೌಡ ಪಾಟೀಲ, ಪ್ರಶಾಂತ ಪೂಜಾರ, ಮಹೇಶ ಬಕ್ಕಣ್ಣನವರ, ಬಸವರಾಜ ಆಕಳದ, ನಾಗಪ್ಪ ಬೊಮ್ಮಣ್ಣನವರ ಸೇರಿದಂತೆ ಹಲವರು ಉಪಸ್ಥಿತರಿದ್ದರು.



## ಗದಗ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ವಾಸಣ್ಣ ಕುರಡಗಿ ಪದಗ್ರಹಣ ಸಮಾರಂಭ ಇಂದು

**ಗದಗ:** ಗದಗ ಜಿಲ್ಲಾ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ವಾಸಣ್ಣ ಕುರಡಗಿ ಅವರ ಪದಗ್ರಹಣ ಸಮಾರಂಭವು ನಗರದ ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿರುವ ಗದಗ ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಚೇರಿಯಲ್ಲಿ 17-10-2026ರಂದು ಮಧ್ಯಾಹ್ನ 2ಕ್ಕೆ ಜರುಗಲಿದೆ.



ಕೆಪಿಸಿಸಿ ರಾಜ್ಯಾಧ್ಯಕ್ಷರಾದ ಬಿ.ಕೆ. ಹರಿಪ್ರಸಾದ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ಉನ್ನತ ಶಿಕ್ಷಣ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಬಸವರಾಜ ರಾಯರಡ್ಡಿ, ಕೆಪಿಸಿಸಿ ಉಪಾಧ್ಯಕ್ಷರು, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರು ಹಾಗೂ ಮಾಜಿ ಶಾಸಕರಾದ ಡಿ. ಆರ್. ಪಾಟೀಲ, ಮಾಜಿ ಸಚಿವರು ಹಾಗೂ ಶಾಸಕರಾದ ಎಚ್.ಕೆ. ಪಾಟೀಲ, ಮಾಜಿ ಶಾಸಕರಾದ ಬಿ.ಆರ್. ಯಾವಗಲ್, ಜಿ.ಎಸ್. ಗಡ್ಡದೇವರಮಠ, ರಾಮಣ್ಣ ಲಮಾಣಿ, ರಾಮಕೃಷ್ಣ ದೊಡ್ಡಮನಿ, ಪಕ್ಷದ ಮುಖಂಡರಾದ ಆನಂದಸ್ವಾಮಿ ಗಡ್ಡದೇವರಮಠ, ಸುಜಾತಾ ದೊಡ್ಡಮನಿ ಹಾಗೂ ಗದಗ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಕೃಷ್ಣಗೌಡ ಎಚ್. ಪಾಟೀಲ, ಗದಗ ಜಿಲ್ಲಾ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಬಿ. ಬಿ. ಅಸೂಟಿ ಪಾಲ್ಗೊಳ್ಳುವರು.

ಕಾರಣ ಕಾರ್ಯಕ್ರಮಕ್ಕೆ ಯಾವತ್ತು ಕಾಂಗ್ರೆಸ್ ಪಕ್ಷದ ಮಾಜಿ ಹಾಗೂ ಹಾಲಿ ಶಾಸಕರುಗಳು, ಪಕ್ಷದ ಜಿಲ್ಲಾ ಪದಾಧಿಕಾರಿಗಳು ಬ್ಲಾಕ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಜಿಲ್ಲಾ ಪಂಚಾಯತ್, ತಾಲೂಕ ಪಂಚಾಯತ, ಗ್ರಾಮ ಪಂಚಾಯತ, ಎಪಿಎಂಸಿ ಪಕ್ಷದ ಅಧ್ಯಕ್ಷರುಗಳು ಹಾಗೂ ಸದಸ್ಯರುಗಳು ಹಾಗೂ ನಗರಸಭೆ ಪಟ್ಟಣ ಪಂಚಾಯ್ತಿ ಪುರಸಭೆ ಅಧ್ಯಕ್ಷರುಗಳು ಹಾಗೂ ಸದಸ್ಯರುಗಳು, ಮಹಿಳಾ ಕಾಂಗ್ರೆಸ್, ಯುವ ಕಾಂಗ್ರೆಸ್, ಎಸ್‌ಸಿ/ಎಸ್‌ಟಿ, ಅಲ್ಪಸಂಖ್ಯಾತರ, ವಿದ್ಯಾರ್ಥಿ ಕಾಂಗ್ರೆಸ್, ಕಾಂಗ್ರೆಸ್ ಸೇವಾದಳ, ಹಿಂದುಳಿದ ವರ್ಗ, ಸಾಮಾಜಿಕ ಜಾಲತಾಣ, ರಾಜೀವಗಾಂಧಿಪಂಚಾಯತಸಂಘಟನೆ,ಮಾಜಿಸೈನಿಕರವಿಭಾಗ, ಮೀನುಗಾರ ವಿಭಾಗ, ಕಾರ್ಮಿಕರ ವಿಭಾಗ, ಐ,ಎನ್,ಟಿ,ಯು,ಸಿ, ಕಾನೂನು ಮತ್ತು ಮಾನವ ಹಕ್ಕು ವಿಭಾಗ, ಕಿಸಾನ್ ಮತ್ತು ಖೇತ್ ಮಜದೂರ ವಿಭಾಗ, ಮಾಜಿ ಸೈನಿಕರ ವಿಭಾಗ, ವೈದ್ಯರ ವಿಭಾಗ, ವೃತ್ತಿಪರ ವಿಭಾಗ, ಪದವಿಧರ ಹಾಗೂ ಶಿಕ್ಷಕರ ವಿಭಾಗ, ನೀತಿ ಮತ್ತು ಸಂಶೋಧನೆ ತರಬೇತಿ ವಿಭಾಗ, ವಿಕಲಚೇತನರ ವಿಭಾಗ, ಲಿಗಲ್ ರೀಫಾರ್ಮ್ಸ್ ವಿಭಾಗ, ಐ,ಟಿ, ಮತ್ತು ಡಾಟಾ ವಿಭಾಗ, ಮಾಧ್ಯಮ ಮತ್ತು ಸಂಪರ್ಕ ಇಲಾಖೆ ವಿಭಾಗ, ಅಧ್ಯಕ್ಷರುಗಳು ಹಾಗೂ ಸದಸ್ಯರುಗಳು, ಪಕ್ಷದ ಅಭಿಮಾನಿಗಳು ಪಾಲ್ಗೊಳ್ಳಬೇಕೆಂದು ಎಂದು ಗದಗ ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷರಾದ ಅಶೋಕ ಮಂದಾಲಿಯವರು ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

## ಸೂಕ್ಷ್ಮ ಪ್ರಕರಣದ ತನಿಖೆಯನ್ನು ಮುಖ್ಯಮಂತ್ರಿ ಗಂಭೀರವಾಗಿ ಪರಿಗಣಿಸಲಿ

**ಗದಗ:** ಸೂಕ್ಷ್ಮ ಪ್ರಕರಣದ ತನಿಖೆಯನ್ನು ಮುಖ್ಯಮಂತ್ರಿ ಗಂಭೀರವಾಗಿ ಪರಿಗಣಿಸಿ, ಸತ್ಯಾಂಶ ಹೊರಬರುವಂತೆ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಒತ್ತಾಯಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂತಹ ಪ್ರಕರಣಗಳಲ್ಲಿ ಮುಖ್ಯಮಂತ್ರಿ ಅವರೇ ಆರಂಭದಲ್ಲಿ ಕ್ರಮ ಕೈಗೊಂಡು, ನಂತರ ನಿರ್ಲಕ್ಷ್ಯ ವಹಿಸಬಾರದು. ತನಿಖೆಯ ಬಗ್ಗೆ ಸಾರ್ವಜನಿಕರಲ್ಲಿ ಅನುಮಾನ ಮೂಡದಂತೆ ಎಲ್ಲ ಆಯಾಮಗಳನ್ನು ಪರಿಶೀಲಿಸಬೇಕು ಎಂದರು.

ತನಿಖೆ ನಡೆಸುವಾಗ ಕಾನೂನು ತಜ್ಞರು ಹಾಗೂ ಅಭಿಯೋಜನಾ ಪರಿಣತರ ಸಲಹೆ ಪಡೆಯಬೇಕು. ಸಾಕ್ಷ್ಯಾಧಾರಗಳ ಆಧಾರದ ಮೇಲೆ ಕಾನೂನು ಪ್ರಕ್ರಿಯೆಗಳನ್ನು ಪಾಲಿಸಿ, ಯಾವುದೇ ಒತ್ತಡಕ್ಕೆ ಒಳಗಾಗದೆ ತನಿಖೆ ನಡೆಸುವುದು ಅಗತ್ಯ ಎಂದು ಹೇಳಿದರು.

ದೇಶದ ವಿವಿಧ ರಾಜ್ಯಗಳಲ್ಲಿ ಇಂತಹ ಪ್ರಕರಣಗಳ ಕುರಿತು ನಡೆದ ತನಿಖೆ ಹಾಗೂ ನ್ಯಾಯಾಲಯದ ಪ್ರಕ್ರಿಯೆಗಳನ್ನು ಗಮನದಲ್ಲಿಟ್ಟುಕೊಂಡು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಬೇಕು. ನ್ಯಾಯಾಲಯದಲ್ಲಿ ಸೂಕ್ತ ರೀತಿಯಲ್ಲಿ ವಾದ ಮಂಡಿಸಿ, ಕಾನೂನು ಮತ್ತು ಸಂವಿಧಾನಾತ್ಮಕ ವ್ಯವಸ್ಥೆಗಳಿಗೆ ಗೌರವ ನೀಡಬೇಕು ಎಂದು ತಿಳಿಸಿದರು. ಆರೋಪ-ಪ್ರತ್ಯಾರೋಪಗಳಿಗೆ ಸೀಮಿತವಾಗದೆ, ಪ್ರಕರಣದ ಸತ್ಯಾಂಶ ಹೊರಬರುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಬಸವರಾಜ ಬೊಮ್ಮಾಯಿ ಹೇಳಿದರು.



## ಮಹಿಳೆಯರು ಕೃಷಿ ಇಲಾಖೆಯ ಸೌಲಭ್ಯಗಳ ಸದ್ಬಳಕೆ ಮಾಡಿಕೊಳ್ಳಲಿ

**ಕೊಪ್ಪಳ:** ಮಹಿಳೆಯರು ಕೃಷಿ ಇಲಾಖೆಯ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಸಬಲರಾಗುವಂತೆ ಸಹಾಯಕ ಕೃಷಿ ನಿರ್ದೇಶಕರಾದ ಶಶಿಕಲಾ ಅವರು ಹೇಳಿದರು. ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಹಾಗೂ ಕೃಷಿ ಇಲಾಖೆಯ 'ಆತ್ಮಾ' ಯೋಜನೆಯ ಸಹಯೋಗದಲ್ಲಿ 'ಕೃಷಿ ನಿರತ ಮಹಿಳಾ ದಿನಾಚರಣೆ' ಅಂಗವಾಗಿ ಕಿಸಾನ್ ಗೋಷ್ಠಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. "ಮಹಿಳೆಯರು ಕೃಷಿ ಕ್ಷೇತ್ರದಲ್ಲಿ ಮುಂಚೂಣಿಗೆ ಬರಬೇಕು. ಕೃಷಿ ಇಲಾಖೆಯಲ್ಲಿ ಲಭ್ಯವಿರುವ ಹಲವು ಯೋಜನೆಗಳು ಹಾಗೂ ಸಹಾಯಧನ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಬೇಕೆಂದರು. ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕರಾದ ಶ್ರೀನಿವಾಸ ಕುಲಕರ್ಣಿ ಅವರು ತಮ್ಮ ಇಲಾಖೆಯಡಿ ಸಿಗುವ ಸಹಾಯಧನ ಹಾಗೂ ವಿವಿಧ ಯೋಜನೆಗಳ ಕುರಿತು ಮಾಹಿತಿ ಹಂಚಿಕೊಂಡರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಮುಖ್ಯಸ್ಥರಾದ ಡಾ. ಬದರಿ ಪ್ರಸಾದ್ ಪಿ. ಆರ್. ಇದ್ದರು. ರೈತರು ಹೆಚ್ಚಿನ ಮಾಹಿತಿಗಾಗಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತರಣಾ ಮುಂದಾಳು ಡಾ. ಬದರಿ ಪ್ರಸಾದ್ ಪಿ.ಆರ್. (ಮೊ: 9900145705) ಅವರನ್ನು ಸಂಪರ್ಕಿಸಬಹುದು.

ಉತ್ತರ ಕರ್ನಾಟಕ ಸುದ್ದಿಗಳು
ಕನ್ನಡ ದಿನ ಪತ್ರಿಕೆ
UTTARA KARNATKA SUDDIGALU
Kannada Daily Morning

# ಆಹಾರದ ಮೇಲೂ ಸೈಬರ್ ದಾಳಿ



**ಮ**ನುಷ್ಯನ ಬದುಕಿನಲ್ಲಿ ಆಹಾರ, ಆರೋಗ್ಯ ಮತ್ತು ಸುರಕ್ಷತೆ ಅತ್ಯಂತ ಮೂಲಭೂತ ಅಗತ್ಯಗಳು. ಅನ್ನವಿಲ್ಲದೆ ಬದುಕಲು ಸಾಧ್ಯವಿಲ್ಲ; ಶುದ್ಧ ಆಹಾರವಿಲ್ಲದೆ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಾಧ್ಯವಿಲ್ಲ. ಆದರೆ ವಿಜ್ಞಾನ ಮತ್ತು ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿರುವ ಇಂದಿನ ಜಗತ್ತಿನಲ್ಲಿ ಮನುಷ್ಯನ ಮೂಲಭೂತ ಅಗತ್ಯಗಳೂ ಸೈಬರ್ ದಾಳಿಯ ಅಪಾಯದಿಂದ ಮುಕ್ತವಾಗಿಲ್ಲ ಎಂಬ ಆತಂಕಕಾರಿ ಚರ್ಚೆಗಳು ಮುನ್ನೆಲೆಗೆ ಬರುತ್ತಿವೆ. ಕಂಪ್ಯೂಟರ್‌ಗಳು, ಬ್ಯಾಂಕ್‌ಗಳು, ಸರ್ಕಾರಿ ಜಾಲಗಳು ಮತ್ತು ವೈಯಕ್ತಿಕ ಮಾಹಿತಿಯನ್ನು ಗುರಿಯಾಗಿಸಿಕೊಂಡಿದ್ದ ಸೈಬರ್ ಅಪರಾಧಗಳು ಈಗ ಆಹಾರ ಸಂಗ್ರಹಣೆ ಹಾಗೂ ವಿತರಣೆಯಂತಹ ಅತ್ಯಂತ ಸೂಕ್ಷ್ಮ ವ್ಯವಸ್ಥೆಗಳಿಗೂ ಅಪಾಯ ತಂದೊಡ್ಡಬಹುದೇ ಎಂಬ ಪ್ರಶ್ನೆಯನ್ನು ಹುಟ್ಟುಹಾಕಿವೆ. ಇತ್ತೀಚೆಗೆ ಫ್ರಾನ್ಸ್‌ನಲ್ಲಿ ಸೂಪರ್‌ಮಾರ್ಕೆಟ್‌ಗಳ ಶೀತಲೀಕರಣ ವ್ಯವಸ್ಥೆಗಳ ಮೇಲೆ ಸೈಬರ್ ದಾಳಿ ನಡೆದಿದ್ದು, 706ಕ್ಕೂ ಹೆಚ್ಚು ಸೂಪರ್‌ಮಾರ್ಕೆಟ್‌ಗಳು ಸ್ಥಗಿತಗೊಂಡಿವೆ, ಆಹಾರ ಪದಾರ್ಥಗಳು ಹಾಳಾಗಿವೆ ಮತ್ತು ಆಹಾರ ವಿತರಣಾ ಸೇವೆಗಳೂ ಅಸ್ತವ್ಯಸ್ತಗೊಂಡಿವೆ ಎಂಬ ವರದಿಯೊಂದು ಗಂಭೀರ ಆತಂಕಕ್ಕೆ ಕಾರಣವಾಗಿದೆ. ವರದಿಯಲ್ಲಿ ಶೀತಲೀಕರಣ ವ್ಯವಸ್ಥೆಯ ಉಷ್ಣಾಂಶ 50 ಡಿಗ್ರಿ ಸೆಲ್ಸಿಯಸ್ ದಾಟಿದ ಪರಿಣಾಮ ಆಹಾರ ಪದಾರ್ಥಗಳು ಬಳಕೆಗೆ ಯೋಗ್ಯವಲ್ಲದ ಸ್ಥಿತಿಗೆ ತಲುಪಿವೆ ಹಾಗೂ ಕೆಲವು ಕಡೆ ಬೆಂಕಿ ಕಾಣಿಸಿಕೊಂಡಿದೆ ಎಂದು ಉಲ್ಲೇಖಿಸಲಾಗಿದೆ. ಆದರೆ ಈ ನಿರ್ದಿಷ್ಟ ಘಟನೆಯ ವಿವರಗಳು ಮತ್ತು ಸೈಬರ್ ದಾಳಿಯ ಕಾರಣಗಳನ್ನು ಸ್ವತಂತ್ರವಾಗಿ ದೃಢಪಡಿಸದೆ ಅವುಗಳನ್ನು ಅಂತಿಮ ಸತ್ಯವೆಂದು ಪರಿಗಣಿಸುವುದು ಸೂಕ್ತವಲ್ಲ. ಆದರೂ, ಇಂತಹ ಘಟನೆ ಸಂಭವಿಸಿದರೆ ಅದರ ಪರಿಣಾಮಗಳು ಎಷ್ಟು ವ್ಯಾಪಕವಾಗಬಹುದು ಎಂಬುದನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಇಲ್ಲಿರುವ ಮುಖ್ಯ ಪ್ರಶ್ನೆ ಕೇವಲ ಸೂಪರ್‌ಮಾರ್ಕೆಟ್‌ಗಳು ಮುಚ್ಚಿದವು ಎಂಬುದಲ್ಲ. ಆಹಾರವನ್ನು ಸುರಕ್ಷಿತವಾಗಿ ಸಂಗ್ರಹಿಸುವ ವ್ಯವಸ್ಥೆಯನ್ನೇ ಯಾರಾದರೂ ದೂರದಿಂದ ನಿಯಂತ್ರಿಸಿ ಅಸ್ತವ್ಯಸ್ತಗೊಳಿಸಲು ಸಾಧ್ಯವಾದರೆ, ಆಧುನಿಕ ಸಮಾಜದ ಆಹಾರ ಭದ್ರತೆ ಎಷ್ಟು ಸುರಕ್ಷಿತವಾಗಿದೆ ಎಂಬುದನ್ನು ನಾವು ಗಂಭೀರವಾಗಿ ಪರಿಶೀಲಿಸಬೇಕಾಗಿದೆ. ಹಿಂದೆ ಆಹಾರ ಪದಾರ್ಥಗಳನ್ನು ಹಾಳುಮಾಡಲು ಅವುಗಳಲ್ಲಿ ನೇರವಾಗಿ ಕಲಬೆರಕೆ ಮಾಡುವುದು ಅಥವಾ ಸಂಗ್ರಹಣಾ ವ್ಯವಸ್ಥೆಗೆ ಹಾನಿ ಮಾಡುವುದು ಅಗತ್ಯವಾಗಿತ್ತು. ಆದರೆ ಡಿಜಿಟಲ್ ತಂತ್ರಜ್ಞಾನಕ್ಕೆ ಅವಲಂಬಿತವಾಗಿರುವ ಇಂದಿನ ವ್ಯವಸ್ಥೆಯಲ್ಲಿ, ಕಂಪ್ಯೂಟರ್ ಜಾಲ ಅಥವಾ ನಿಯಂತ್ರಣ ಸಾಧನಗಳಲ್ಲಿನ ದೌರ್ಬಲ್ಯವನ್ನು ದುರುಪಯೋಗಪಡಿಸಿಕೊಂಡು ಆಹಾರ ಸಂಗ್ರಹಣೆಯ ಪ್ರಕ್ರಿಯೆಯನ್ನೇ ಅಸ್ತವ್ಯಸ್ತಗೊಳಿಸುವ ಅಪಾಯವನ್ನು ತಳ್ಳಿಹಾಕಲುಸಾಧ್ಯವಿಲ್ಲ. ಆಹಾರ ಭದ್ರತೆ ಎಂದರೆ ಕೇವಲ ಆಹಾರ ಉತ್ಪಾದನೆಯಲ್ಲ ಅದನ್ನು ಸುರಕ್ಷಿತವಾಗಿ ಸಂಗ್ರಹಿಸಿ, ಸಾಗಿಸಿ, ಜನರಿಗೆ ತಲುಪಿಸುವ ವ್ಯವಸ್ಥೆಯ ರಕ್ಷಣೆಯೂ ಹೌದು. ಹೊಲದಲ್ಲಿ ಬೆಳೆದ ಬೆಳೆ, ಆಹಾರ ಸಂಸ್ಕರಣಾ ಘಟಕದಲ್ಲಿ ತಯಾರಾದ ಉತ್ಪನ್ನ, ಶೀತಲೀಕರಣ ವಾಹನದಲ್ಲಿ ಸಾಗುವ ವಸ್ತುಗಳು ಮತ್ತು ಸೂಪರ್‌ಮಾರ್ಕೆಟ್‌ನ ಶೀತಲೀಕೃತ ವಿಭಾಗದಲ್ಲಿ ಇಡಲಾಗುವ ಆಹಾರ ಇವೆಲ್ಲವೂ ಒಂದಕ್ಕೊಂದು ಸಂಪರ್ಕ ಹೊಂದಿರುವ ಪೂರೈಕೆ ಸರಪಳಿಯ ಭಾಗಗಳಾಗಿವೆ. ಈ ಸರಪಳಿಯ ಯಾವುದೇ ಪ್ರಮುಖ ಕೊಂಡಿ ವಿಫಲವಾದರೂ ಅದರ ಪರಿಣಾಮ ಗ್ರಾಹಕರವರೆಗೆ ತಲುಪಬಹುದು.

ಮಾಂಸ, ಮೀನು, ಹಾಲು, ಹಾಲಿನ ಉತ್ಪನ್ನಗಳು ಮತ್ತು ಕೆಲವು ಸಿದ್ಧ ಆಹಾರ ಪದಾರ್ಥಗಳನ್ನು ನಿರ್ದಿಷ್ಟ ತಾಪಮಾನದಲ್ಲಿ ಸಂಗ್ರಹಿಸುವುದು ಅತ್ಯಂತ ಮುಖ್ಯ. ಅಗತ್ಯಕ್ಕಿಂತ ಹೆಚ್ಚಿನ ತಾಪಮಾನದಲ್ಲಿ ಅವುಗಳನ್ನು ದೀರ್ಘಕಾಲ ಇಟ್ಟರೆ ಹಾನಿಕಾರಕ ಸೂಕ್ಷ್ಮಜೀವಿಗಳು ಬೆಳೆಯುವ ಸಾಧ್ಯತೆ ಹೆಚ್ಚುತ್ತದೆ. ಇಂತಹ ಆಹಾರವನ್ನು ಸೇವಿಸುವುದರಿಂದ ಆಹಾರಜನ್ಯ ಕಾಯಿಲೆಗಳು ಉಂಟಾಗಬಹುದು. ಕೆಲವು ಸಂದರ್ಭಗಳಲ್ಲಿ ಆಹಾರವನ್ನು ಮತ್ತೆ ತಂಪಾಗಿಸಿದರೂ ಅದರ ಸುರಕ್ಷತೆ ಖಚಿತವಾಗುವುದಿಲ್ಲ. ಹೀಗಾಗಿ ಶೀತಲೀಕರಣ ವ್ಯವಸ್ಥೆಯಲ್ಲಿ ತೊಂದರೆ ಕಂಡುಬಂದಾಗ ತಾಪಮಾನವನ್ನು ಪರಿಶೀಲಿಸುವುದು, ಆಹಾರ ಸುರಕ್ಷತಾ ನಿಯಮಗಳನ್ನು ಪಾಲಿಸುವುದು ಮತ್ತು ಅಗತ್ಯವಿದ್ದಲ್ಲಿ ಆಹಾರವನ್ನು ಮಾರಾಟದಿಂದ ಹಿಂಪಡೆಯುವುದು ಅತ್ಯಗತ್ಯ. ಆಹಾರ ಹಾಳಾದರೆ ಅದರ ಬೆಲೆಯಷ್ಟೇ ನಷ್ಟವಲ್ಲ; ಅದನ್ನು ಸೇವಿಸುವವರ ಆರೋಗ್ಯವೂ ಅಪಾಯಕ್ಕೆ ಸಿಲುಕಬಹುದು. ಇಂತಹ ದಾಳಿಯನ್ನು ಕೇವಲ ತಂತ್ರಜ್ಞಾನಕ್ಕೆ ಸಂಬಂಧಿಸಿದ ಅಪರಾಧವೆಂದು ಪರಿಗಣಿಸುವುದು ಸಾಕಾಗುವುದಿಲ್ಲ. ಉದ್ದೇಶಪೂರ್ವಕವಾಗಿ ಆಹಾರ ಸಂಗ್ರಹಣೆಯ ವ್ಯವಸ್ಥೆಯನ್ನು ಹಾಳುಮಾಡಿ ಜನರ ಆರೋಗ್ಯಕ್ಕೆ ಅಪಾಯ ಉಂಟುಮಾಡುವ ಕೃತ್ಯ ಸಾಬೀತಾದರೆ, ಅದರ ಪರಿಣಾಮದ ಆಧಾರದ ಮೇಲೆ ಅದನ್ನು ಗಂಭೀರ ಅಪರಾಧವೆಂದು ಪರಿಗಣಿಸಬೇಕಾಗುತ್ತದೆ. ಆದರೆ ಪ್ರತಿಯೊಂದು ಸೈಬರ್ ದಾಳಿಯನ್ನೂ ತಕ್ಷಣವೇ 'ಆಹಾರ ಭಯೋತ್ಪಾದನೆ' ಎಂದು ಕರೆಯುವುದಕ್ಕಿಂತ, ಅದರ ಉದ್ದೇಶ, ಪರಿಣಾಮ, ಸಾಕ್ಷ್ಯ ಮತ್ತು ಕಾನೂನುಬದ್ಧ ವ್ಯಾಖ್ಯಾನಗಳನ್ನು ಪರಿಶೀಲಿಸುವುದು ಅಗತ್ಯ. ಪದಗಳ ತೀವ್ರತೆಗಿಂತ ಅಪರಾಧದ ಸ್ವರೂಪವನ್ನು ನಿಖರವಾಗಿ ಗುರುತಿಸಿ ಕ್ರಮ ಕೈಗೊಳ್ಳುವುದು ಮುಖ್ಯ. ಇಂದು ಜಗತ್ತಿನ ಅನೇಕ ಕ್ಷೇತ್ರಗಳು ಡಿಜಿಟಲ್ ತಂತ್ರಜ್ಞಾನವನ್ನು ಅವಲಂಬಿಸಿವೆ. ಸೂಪರ್‌ಮಾರ್ಕೆಟ್‌ಗಳ ಸಂಗ್ರಹಣಾ ವ್ಯವಸ್ಥೆ, ಗೋದಾಮುಗಳ ತಾಪಮಾನ ನಿಯಂತ್ರಣ, ಆಹಾರ ಸಾಗಿಸುವ ವಾಹನಗಳ ಮೇಲ್ವಿಚಾರಣೆ, ಆನ್‌ಲೈನ್ ಆರ್ಡರ್‌ಗಳು ಮತ್ತು ವಿತರಣಾ ಜಾಲಗಳು ತಂತ್ರಜ್ಞಾನದ ನೆರವಿನಿಂದ ಕಾರ್ಯನಿರ್ವಹಿಸುತ್ತವೆ. ಈ ವ್ಯವಸ್ಥೆಗಳು ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತವೆ; ಆಹಾರದ ಗುಣಮಟ್ಟ ಕಾಪಾಡಲು ಸಹಾಯ ಮಾಡುತ್ತವೆ; ನಷ್ಟವನ್ನು ಕಡಿಮೆ ಮಾಡುತ್ತವೆ. ಆದರೆ ಇದೇ ತಂತ್ರಜ್ಞಾನವನ್ನು ಸುರಕ್ಷಿತವಾಗಿ ನಿರ್ವಹಿಸದಿದ್ದರೆ, ಅದು ಹೊಸ ರೀತಿಯ ಅಪಾಯಗಳಿಗೆ ಬಾಗಿಲು ತೆರೆಯಬಹುದು. ಇಲ್ಲಿ ಪ್ರಶ್ನೆ ತಂತ್ರಜ್ಞಾನವನ್ನು ತಿರಸ್ಕರಿಸುವುದಲ್ಲ; ತಂತ್ರಜ್ಞಾನವನ್ನು ಎಷ್ಟು ಜವಾಬ್ದಾರಿಯಿಂದ ಬಳಸುತ್ತಿದ್ದೇವೆ ಎಂಬುದಾಗಿದೆ. ಡಿಜಿಟಲ್ ವ್ಯವಸ್ಥೆಗಳನ್ನು ಅಳವಡಿಸಿಕೊಂಡು ಉತ್ಪಾದನೆ ಮತ್ತು ವ್ಯಾಪಾರವನ್ನು ವೇಗಗೊಳಿಸುವ ಸಂಸ್ಥೆಗಳು ಅವುಗಳ ಸುರಕ್ಷತೆಯಲ್ಲಿಯೂ ಸಮಾನ ಆದ್ಯತೆ ನೀಡಬೇಕು. ಸೈಬರ್ ಭದ್ರತೆ ಎಂದರೆ ಕೇವಲ ಕಂಪ್ಯೂಟರ್‌ಗೆ ಪಾಸ್‌ವರ್ಡ್ ಹಾಕುವುದು ಅಥವಾ ಆಂಟಿವೈರಸ್ ತಂತ್ರಾಂಶ ಬಳಸುವುದಲ್ಲ. ನಿಯಂತ್ರಣ ವ್ಯವಸ್ಥೆಗಳಿಗೆ ಅನಧಿಕೃತ ಪ್ರವೇಶವನ್ನು ತಡೆಯುವುದು, ಸಾಫ್ಟ್‌ವೇರ್‌ಗಳನ್ನು ನಿಯಮಿತವಾಗಿ ನವೀಕರಿಸುವುದು, ಸಿಬ್ಬಂದಿಗೆ ತರಬೇತಿ ನೀಡುವುದು, ಅನುಮಾನಾಸ್ಪದ ಚಟುವಟಿಕೆಗಳನ್ನು ತಕ್ಷಣ ಗುರುತಿಸುವುದು ಮತ್ತು ತುರ್ತು ಪರಿಸ್ಥಿತಿಯಲ್ಲಿ ವ್ಯವಸ್ಥೆಯನ್ನು ಸುರಕ್ಷಿತವಾಗಿ ಕೈಯಾರೆ ನಿರ್ವಹಿಸುವ ವ್ಯವಸ್ಥೆ ಹೊಂದಿರುವುದೂ ಅದರ ಭಾಗಗಳಾಗಿವೆ. ವಿಶೇಷವಾಗಿ ಆಹಾರ ಸಂಗ್ರಹಣಾ ವ್ಯವಸ್ಥೆಗಳಂತಹ ಭೌತಿಕ ಸಾಧನಗಳನ್ನು ನಿಯಂತ್ರಿಸುವ ಡಿಜಿಟಲ್ ಜಾಲಗಳಿಗೆ ಪ್ರತ್ಯೇಕ ಭದ್ರತಾ ಕ್ರಮಗಳು ಅಗತ್ಯ. ಕಂಪ್ಯೂಟರ್ ಜಾಲಕ್ಕೆ ಅನಧಿಕೃತ ಪ್ರವೇಶವಾದರೂ ಶೀತಲೀಕರಣ ವ್ಯವಸ್ಥೆಯ ತಾಪಮಾನದಲ್ಲಿ ಅಪಾಯಕಾರಿ ಬದಲಾವಣೆ ಸಂಭವಿಸುವುದನ್ನು ತಡೆಯುವ ವ್ಯವಸ್ಥೆ ಇರಬೇಕು. ತಾಪಮಾನ ನಿಗದಿತ ಮಿತಿಯನ್ನು ಮೀರಿದಾಗ ತಕ್ಷಣ ಎಚ್ಚರಿಕೆ ನೀಡುವ ಸಂವೇದಕಗಳು, ಪರ್ಯಾಯ ವಿದ್ಯುತ್ ವ್ಯವಸ್ಥೆಗಳು, ಸ್ವತಂತ್ರ ಮೇಲ್ವಿಚಾರಣಾ ಸಾಧನಗಳು ಮತ್ತು ಮಾನವ ಹಸ್ತಕ್ಷೇಪದ ಮೂಲಕ ನಿಯಂತ್ರಣ ಮರಳಿ ಪಡೆಯುವ ಕ್ರಮಗಳು ಮಹತ್ವದವು. ತಂತ್ರಜ್ಞಾನ ವಿಫಲವಾದಾಗ ಸಂಪೂರ್ಣ ವ್ಯವಸ್ಥೆಯೇ ಕುಸಿದುಬೀಳದಂತೆ ಪರ್ಯಾಯ ವ್ಯವಸ್ಥೆಗಳನ್ನು ಸಿದ್ಧವಾಗಿಟ್ಟುಕೊಳ್ಳಬೇಕು. ಇಂತಹ ಘಟನೆಗಳು ಆಹಾರ ಉದ್ಯಮದ ಹೊಣೆಗಾರಿಕೆಯನ್ನು ಮತ್ತೊಮ್ಮೆ ನೆನಪಿಸುತ್ತವೆ. ಆಹಾರ ಮಾರಾಟ ಮಾಡುವ ಸಂಸ್ಥೆಯ ಗುರಿ ಕೇವಲ ವಸ್ತುಗಳನ್ನು ಮಾರಾಟ ಮಾಡಿ ಲಾಭ ಗಳಿಸುವುದಾಗಿರಬಾರದು. ಗ್ರಾಹಕರಿಗೆ ಸುರಕ್ಷಿತ ಆಹಾರ ಒದಗಿಸುವುದು ಅದರ ಮೂಲಭೂತ ಜವಾಬ್ದಾರಿಯಾಗಿದೆ. ಶೀತಲೀಕರಣ ವ್ಯವಸ್ಥೆ ಸ್ಥಗಿತಗೊಂಡರೆ ತಕ್ಷಣ ತಾಪಮಾನ ಪರಿಶೀಲಿಸಿ, ಹಾಳಾಗಿರುವ ಅಥವಾ ಸುರಕ್ಷತೆಯ ಬಗ್ಗೆ ಅನುಮಾನವಿರುವ ಆಹಾರವನ್ನು ಪ್ರತ್ಯೇಕಿಸಬೇಕು. ಮಾರಾಟಕ್ಕೆ ಯೋಗ್ಯವಲ್ಲದ ವಸ್ತುಗಳನ್ನು ಮತ್ತೆ ಮಾರುಕಟ್ಟೆಗೆ ಬಿಡಬಾರದು. ಅಗತ್ಯವಿದ್ದರೆ ಗ್ರಾಹಕರಿಗೆ ಮಾಹಿತಿ ನೀಡಬೇಕು ಮತ್ತು ಆಹಾರ ಸುರಕ್ಷತಾ ಅಧಿಕಾರಿಗಳೊಂದಿಗೆ ಸಹಕರಿಸಬೇಕು. ನಷ್ಟವನ್ನು ತಪ್ಪಿಸುವ ಹೆಸರಿನಲ್ಲಿ ಜನರ ಆರೋಗ್ಯದೊಂದಿಗೆ ರಾಜಿ ಮಾಡಿಕೊಳ್ಳುವುದು ಯಾವುದೇ ಕಾರಣಕ್ಕೂ ಸಮರ್ಥನೀಯವಲ್ಲ.

ತಂತ್ರಜ್ಞಾನದ ದುರ್ಬಳಕೆ ಮಾನವ ಬದುಕಿಗೆ ಹೊಸ ಆತಂಕ

ಸರ್ಕಾರಗಳ ಪಾತ್ರವೂ ಇಲ್ಲಿ ನಿರ್ಣಾಯಕವಾಗಿದೆ. ಆಹಾರ ಭದ್ರತೆ ಮತ್ತು ಸೈಬರ್ ಭದ್ರತೆಯನ್ನು ಪ್ರತ್ಯೇಕ ವಿಷಯಗಳೆಂದು ನೋಡುವ ಹಳೆಯ ದೃಷ್ಟಿಕೋನವನ್ನು ಬದಲಾಯಿಸಬೇಕಾಗಿದೆ. ಆಹಾರ ಸಂಸ್ಕರಣಾ ಘಟಕಗಳು, ಶೀತಲೀಕರಣ ಗೋದಾಮುಗಳು, ದೊಡ್ಡ ಚಿಲ್ಲರೆ ಮಾರಾಟ ಮಳಿಗೆಗಳು ಮತ್ತು ವಿತರಣಾ ಜಾಲಗಳ ಸುರಕ್ಷತೆಯನ್ನು ಪರಿಶೀಲಿಸುವಾಗ ಡಿಜಿಟಲ್ ಅಪಾಯಗಳನ್ನೂ ಪರಿಗಣಿಸಬೇಕು. ಆಹಾರ ಸುರಕ್ಷತಾ ಅಧಿಕಾರಿಗಳು, ಸೈಬರ್ ಭದ್ರತಾ ತಜ್ಞರು ಮತ್ತು ತುರ್ತು ಪ್ರತಿಕ್ರಿಯೆ ಸಂಸ್ಥೆಗಳ ನಡುವೆ ಸಮನ್ವಯ ಅಗತ್ಯ. ದೊಡ್ಡ ಪ್ರಮಾಣದ ವ್ಯವಸ್ಥೆ ಸ್ಥಗಿತಗೊಂಡಾಗ ಜನರಿಗೆ ಆಹಾರ ಪೂರೈಕೆ ಮುಂದುವರಿಯುವಂತೆ ಪರ್ಯಾಯ ಯೋಜನೆಗಳನ್ನು ರೂಪಿಸಬೇಕು. ಭಾರತದಂತಹ ವಿಶಾಲ ಜನಸಂಖ್ಯೆಯ ದೇಶದಲ್ಲಿ ಈ ವಿಷಯಕ್ಕೆ ವಿಶೇಷ ಮಹತ್ವವಿದೆ. ನಮ್ಮಲ್ಲಿ ಸಣ್ಣ ಕಿರಾಣಿ ಅಂಗಡಿಗಳಿಂದ ಹಿಡಿದು ದೊಡ್ಡ ಸೂಪರ್‌ಮಾರ್ಕೆಟ್‌ಗಳವರೆಗೆ, ಸ್ಥಳೀಯ ಮಾರುಕಟ್ಟೆಗಳಿಂದ ಹಿಡಿದು ಆನ್‌ಲೈನ್ ಆಹಾರ ವಿತರಣಾ ವ್ಯವಸ್ಥೆಗಳವರೆಗೆ ವೈವಿಧ್ಯಮಯ ಪೂರೈಕೆ ಜಾಲವಿದೆ. ನಗರ ಪ್ರದೇಶಗಳಲ್ಲಿ ಅನೇಕ ಕುಟುಂಬಗಳು ದಿನನಿತ್ಯದ ಆಹಾರ ಖರೀದಿಗೆ ದೊಡ್ಡ ಚಿಲ್ಲರೆ ಮಳಿಗೆಗಳು ಮತ್ತು ಆನ್‌ಲೈನ್ ಸೇವೆಗಳನ್ನು ಅವಲಂಬಿಸುತ್ತಿವೆ. ಹೋಟೆಲ್‌ಗಳು, ಆಸ್ಪತ್ರೆಗಳು, ವಸತಿನಿಲಯಗಳು ಮತ್ತು ದೊಡ್ಡ ಅಡುಗೆಮನೆಗಳೂ ಆಹಾರ ಸಂಗ್ರಹಣಾ ವ್ಯವಸ್ಥೆಗಳನ್ನು ಬಳಸುತ್ತವೆ. ಈ ವ್ಯವಸ್ಥೆಗಳಲ್ಲಿ ಡಿಜಿಟಲ್ ತಂತ್ರಜ್ಞಾನದ ಬಳಕೆ ಹೆಚ್ಚಾದಂತೆ ಅದರ ಸುರಕ್ಷತೆಯೂ ಸಾರ್ವಜನಿಕ ಹಿತಾಸಕ್ತಿಯ ಭಾಗವಾಗುತ್ತದೆ. ಆಹಾರ ಪೂರೈಕೆಯಲ್ಲಿ ವ್ಯತ್ಯಯ ಉಂಟಾದರೆ ಮೊದಲು ತೊಂದರೆ ಅನುಭವಿಸುವವರು ಆರ್ಥಿಕವಾಗಿ ದುರ್ಬಲರಾದವರಾಗಿರಬಹುದು. ದಿನಗೂಲಿ ಕಾರ್ಮಿಕರು, ಕಡಿಮೆ ಆದಾಯದ ಕುಟುಂಬಗಳು ಮತ್ತು ದಿನನಿತ್ಯದ ಖರೀದಿಯನ್ನೇ ಅವಲಂಬಿಸಿರುವ ಜನರಿಗೆ ಆಹಾರದ ಬೆಲೆ ಏರಿಕೆ ಅಥವಾ ಪೂರೈಕೆಯ ವ್ಯತ್ಯಯ ಗಂಭೀರ ಪರಿಣಾಮ ಉಂಟುಮಾಡಬಹುದು. ದೊಡ್ಡ ಸಂಸ್ಥೆಗಳು ಆರ್ಥಿಕ ನಷ್ಟವನ್ನು ಭರಿಸಬಹುದು ಆದರೆ ಸಾಮಾನ್ಯ ಕುಟುಂಬಕ್ಕೆ ಹೆಚ್ಚುವರಿ ವೆಚ್ಚವೇ ದೊಡ್ಡ ಹೊರೆಯಾಗಬಹುದು. ಆದ್ದರಿಂದ ಆಹಾರ ಪೂರೈಕೆಯ ಸುರಕ್ಷತೆಯನ್ನು ಕೇವಲ ಕಂಪನಿಗಳ ವ್ಯವಹಾರಿಕ ಸಮಸ್ಯೆಯಾಗಿ ನೋಡದೆ, ಸಾರ್ವಜನಿಕ ಹಿತಾಸಕ್ತಿಯ ವಿಷಯವಾಗಿ ಪರಿಗಣಿಸಬೇಕು. ಸೈಬರ್ ಅಪರಾಧಗಳ ಹಿಂದೆ ಹಣ ವಸೂಲಿ, ವ್ಯಾಪಾರಕ್ಕೆ ಅಡ್ಡಿಪಡಿಸುವುದು, ಮಾಹಿತಿ ಕಳವು ಅಥವಾ ಇತರ ದುರುದ್ದೇಶಗಳು ಇರಬಹುದು. ಕೆಲವು ದಾಳಿಗಳು ವ್ಯವಸ್ಥೆಗಳನ್ನು ಸ್ಥಗಿತಗೊಳಿಸುವ ಮೂಲಕ ಸಂಸ್ಥೆಗಳನ್ನು ಒತ್ತಡಕ್ಕೆ ಸಿಲುಕಿಸಲು ಪ್ರಯತ್ನಿಸುತ್ತವೆ. ಆದರೆ ಆಹಾರ ಸಂಗ್ರಹಣೆಯಂತಹ ವ್ಯವಸ್ಥೆಗಳಲ್ಲಿ ಉಂಟಾಗುವ ವ್ಯತ್ಯಯದ ಪರಿಣಾಮ ಕಂಪನಿಯ ಲಾಭನಷ್ಟಕ್ಕೆ ಮಾತ್ರ ಸೀಮಿತವಾಗುವುದಿಲ್ಲ. ಆಹಾರ ಹಾಳಾಗಬಹುದು, ಪೂರೈಕೆ ವಿಳಂಬವಾಗಬಹುದು, ಸಾರ್ವಜನಿಕರಲ್ಲಿ ಆತಂಕ ಉಂಟಾಗಬಹುದು ಮತ್ತು ಆರೋಗ್ಯದ ಅಪಾಯಗಳು ಹೆಚ್ಚಾಗಬಹುದು. ಈ ಕಾರಣದಿಂದ ಆಹಾರ ಕ್ಷೇತ್ರದ ಡಿಜಿಟಲ್ ಸುರಕ್ಷತೆಗೆ ವಿಶೇಷ ಗಮನ ನೀಡುವುದು ಅತ್ಯಗತ್ಯ. ಇದಕ್ಕೆ ಪರಿಹಾರವಾಗಿ ತಂತ್ರಜ್ಞಾನವನ್ನು ಸಂಪೂರ್ಣವಾಗಿ ದೂರವಿಡುವುದು ಸಾಧ್ಯವೂ ಅಲ್ಲ, ಸೂಕ್ತವೂ ಅಲ್ಲ. ಬದಲಾಗಿ ತಂತ್ರಜ್ಞಾನಕ್ಕೆ ಭದ್ರತೆಯ ಕವಚ ಒದಗಿಸಬೇಕು. ಸಂಸ್ಥೆಗಳು ನಿಯಮಿತವಾಗಿ ಸೈಬರ್ ಭದ್ರತಾ ಪರಿಶೀಲನೆ ನಡೆಸಬೇಕು. ತುರ್ತು ಪರಿಸ್ಥಿತಿಗಳಿಗಾಗಿ ಪೂರ್ವಸಿದ್ಧತಾ ಅಭ್ಯಾಸಗಳನ್ನು ಮಾಡಬೇಕು. ಆಹಾರ ಸುರಕ್ಷತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಸೈಬರ್ ದಾಳಿಯಿಂದ ಉಂಟಾದ ವ್ಯತ್ಯಯವನ್ನು ತಕ್ಷಣ ಗುರುತಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು. ಆಹಾರ ಸುರಕ್ಷತೆಗೆ ಸಂಬಂಧಿಸಿದ ಎಚ್ಚರಿಕೆಗಳನ್ನು ಗ್ರಾಹಕರಿಗೆ ತ್ವರಿತವಾಗಿ ತಲುಪಿಸುವ ವ್ಯವಸ್ಥೆಯೂ ಇರಬೇಕು. ಇಂತಹ ಸಮಗ್ರ ಕ್ರಮಗಳು ಸಂಭವನೀಯ ಅಪಾಯವನ್ನು ಕಡಿಮೆ ಮಾಡಬಹುದು. ಮನುಷ್ಯ ತನ್ನ ಬುದ್ಧಿಶಕ್ತಿಯಿಂದ ಪ್ರಕೃತಿಯನ್ನು ಅರ್ಥಮಾಡಿಕೊಂಡು ಕೃಷಿಯನ್ನು ಬೆಳೆಸಿದ. ವಿಜ್ಞಾನದಿಂದ ಆಹಾರವನ್ನು ದೀರ್ಘಕಾಲ ಸಂಗ್ರಹಿಸುವ ವಿಧಾನಗಳನ್ನು ಕಂಡುಕೊಂಡ. ತಂತ್ರಜ್ಞಾನದಿಂದ ಆಹಾರವನ್ನು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸುರಕ್ಷಿತವಾಗಿ ಸಾಗಿಸುವ ಸಾಮರ್ಥ್ಯವನ್ನು ಗಳಿಸಿದ. ಆದರೆ ಅದೇ ತಂತ್ರಜ್ಞಾನವನ್ನು ದುರುದ್ದೇಶದಿಂದ ಬಳಸಿದರೆ, ಮನುಷ್ಯ ನಿರ್ಮಿಸಿದ ಅನುಕೂಲಗಳೇ ಅವನಿಗೆ ಸಂಕಷ್ಟವನ್ನು ತಂದೊಡ್ಡಬಹುದು. ಪ್ರಗತಿಯ ನಿಜವಾದ ಅರ್ಥ ಕೇವಲ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದಲ್ಲ; ಅದರ ಅಪಾಯಗಳನ್ನು ಗುರುತಿಸಿ, ಅವುಗಳಿಂದ ಜನರನ್ನು ರಕ್ಷಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದಾಗಿದೆ. ಇಂದು ಜಗತ್ತು ಎದುರಿಸುತ್ತಿರುವ ಸವಾಲು ಕೇವಲ ಆಹಾರದ ಕೊರತೆಯಲ್ಲ; ಲಭ್ಯವಿರುವ ಆಹಾರವನ್ನು ಸುರಕ್ಷಿತವಾಗಿ ಸಂಗ್ರಹಿಸಿ, ಸರಿಯಾದ ಸಮಯಕ್ಕೆ, ಸರಿಯಾದ ಗುಣಮಟ್ಟದಲ್ಲಿ ಜನರಿಗೆ ತಲುಪಿಸುವುದೂ ಆಗಿದೆ. ಆಹಾರವನ್ನು ಹಾಳುಮಾಡುವ ಯಾವುದೇ ಉದ್ದೇಶಪೂರ್ವಕ ಕೃತ್ಯ ಮಾನವೀಯತೆಯ ವಿರುದ್ಧದ ಕೃತ್ಯವಾಗಿದೆ. ಡಿಜಿಟಲ್ ಜಗತ್ತಿನ ಅಪರಾಧಗಳು ಭೌತಿಕ ಜಗತ್ತಿನ ಬದುಕಿನ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದಕ್ಕೆ ಇಂತಹ ವರದಿಗಳು ಎಚ್ಚರಿಕೆಯ ಗಂಟೆಯಾಗಿವೆ. ನಾಳೆ ನಮ್ಮ ಬ್ಯಾಂಕ್ ಖಾತೆ, ವೈಯಕ್ತಿಕ ಮಾಹಿತಿ ಅಥವಾ ವ್ಯಾಪಾರ ವ್ಯವಸ್ಥೆ ಮಾತ್ರವಲ್ಲ, ನಮ್ಮ ಆಹಾರದ ಸುರಕ್ಷತೆಯೂ ಸೈಬರ್ ದಾಳಿಯ ಗುರಿಯಾದರೆ ನಾವು ಸಿದ್ಧರಿದ್ದೇವೆಯೇ? ಈ ಪ್ರಶ್ನೆಗೆ ಉತ್ತರವನ್ನು ಸಂಕಷ್ಟ ಎದುರಾದ ನಂತರ ಹುಡುಕುವ ಬದಲು, ಇಂದೇ ಸಿದ್ಧತೆ ಮಾಡಿಕೊಳ್ಳಬೇಕು. ಆಹಾರ ಭದ್ರತೆ, ಆರೋಗ್ಯ ಭದ್ರತೆ ಮತ್ತು ಸೈಬರ್ ಭದ್ರತೆ ಈ ಮೂರನ್ನೂ ಪರಸ್ಪರ ಸಂಬಂಧಿತ ವಿಷಯಗಳೆಂದು ಪರಿಗಣಿಸುವ ಕಾಲ ಬಂದಿದೆ. ತಂತ್ರಜ್ಞಾನ ಮಾನವ ಬದುಕನ್ನು ಸುಲಭಗೊಳಿಸಬೇಕೇ ಹೊರತು, ಮನುಷ್ಯನ ಅನ್ನದ ತಟ್ಟೆಯನ್ನೇ ಅಪಾಯಕ್ಕೆ ಸಿಲುಕಿಸಬಾರದು. ಏಕೆಂದರೆ ಆಹಾರ ಕೇವಲ ವ್ಯಾಪಾರದ ವಸ್ತುವಲ್ಲ; ಅದು ಬದುಕಿನ ಆಧಾರ. ಆ ಆಧಾರವನ್ನೇ ಅಸ್ಥಿರಗೊಳಿಸುವ ಅಪರಾಧಗಳ ವಿರುದ್ಧ ಜಗತ್ತು ಎಚ್ಚರವಾಗಬೇಕಿದೆ.



ಅನಂತ ಪಪ್ಪು,
ಬೆಳಗಾವಿ
ಮೋ:9448527870

## ಮಹರ್ಷಿ ವಾಲ್ಮೀಕಿ ಜಯಂತಿ ಪೂರ್ವಭಾವಿ ಸಭೆ ಬಹಿಷ್ಕಾರ

### ಸಭೆ ಆಯೋಜಿಸಿದ್ದ ಕೊಠಡಿಯಲ್ಲಿ ಎಲ್ಲೆಂದರಲ್ಲಿ ಕಸದ ರಾಶಿ ಆರೋಪ

**ರೋಣ:** ವಾಲ್ಮೀಕಿ ಜಯಂತಿ ಆಚರಣೆ ಕುರಿತು ತಾಲೂಕು ಆಡಳಿತದಿಂದ ಶುಕ್ರವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯನ್ನು ಸಮಾಜದ ಮುಖಂಡರು ಬಹಿಷ್ಕರಿಸಿ ಹೊರನಡೆದರು.

ತಹಸೀಲ್ದಾರ್ ಕಚೇರಿಯ ಮೇಲ್ಮಹಡಿಯಲ್ಲಿನ ಆಹಾರ ಇಲಾಖೆ ಕೊಠಡಿಯ ಒಂದು ಬದಿಯಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿತ್ತು. ಆದೆ, ಕೊಠಡಿಯಲ್ಲಿ ಎಲ್ಲೆಂದರಲ್ಲಿ ಕಸದ ರಾಶಿ ಕಣ್ಣಿಗೆ ರಾಚುತ್ತಿತ್ತು. ಖುರ್ಚಿಗಳು ಧೂಳು ತಿಂದಿದ್ದವು. ಇದರಿಂದ ಕೆರಳಿದ ಸಮಾಜದ ಮುಖಂಡರು ಸಭೆ ನಡೆಸುವುದಾದರೆ ತಹಸೀಲ್ದಾರ್ ಕಚೇರಿಯ ಸಭಾಭವನದಲ್ಲಿ ನಡೆಸಿ, ಇಲ್ಲದಿದ್ದರೆ ಸಭೆ ಮಾಡುವುದೇ ಬೇಡ ಎಂದು ಒಕ್ಕೂರಲಿನಿಂದ ಒತ್ತಾಯಿಸಿದರು. ಇದಕ್ಕೆ ಅಧಿಕಾರಿಗಳು ಒಪ್ಪದ ಕಾರಣ ಅನಿವಾರ್ಯವಾಗಿ ಪೂರ್ವಭಾವಿ ಸಭೆ ಬಹಿಷ್ಕರಿಸಿ ಹೊರನಡೆದರು.

**ನಿಷ್ಕಾಳಜಿ ಆರೋಪ:** ವಿವಿಧ ಮಹನೀಯರ ಜಯಂತಿ ಆಚರಣೆಗಳ ಜವಾಬ್ದಾರಿ ಸಮಾಜ ಕಲ್ಯಾಣ ಇಲಾಖೆಯದು. ಆದರೆ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕಿ ಗೀತಾ ಆಲೂರ ಅವರು ಮಹನೀಯರ ಜಯಂತಿ ಹಾಗೂ ಪೂರ್ವಭಾವಿ ಸಭೆಗಳ ಬಗ್ಗೆ ನಿಷ್ಕಾಳಜಿ ತೋರುತ್ತಿದ್ದಾರೆ. ಇದು ಕೇವಲ ನಮ್ಮ ಸಮಾಜಕ್ಕೆ ಆದ ಅಪಮಾನವಲ್ಲ. ಮನುಕುಲದ ಏಳಿಗೆಗೆ ರಾಮಾಯಣ ಎಂಬ ಮಹಾಕಾವ್ಯ ರಚಿಸಿದ ಮಹರ್ಷಿ ವಾಲ್ಮೀಕಿ ಅವರಿಗೆ ಮಾಡಿದ ಅಪಮಾನ ಎಂದು ವಾಲ್ಮೀಕಿ ಸಮಾಜದ ತಾಲೂಕು ಅಧ್ಯಕ್ಷ ಬಸವರಾಜ ಹ. ತಳವಾರ ಆರೋಪಿಸಿದರು.

ತಾಪಂ ಇಒ ಚಂದ್ರಶೇಖರ ಕಂದಕೂರ, ಲೋಕೋಪಯೋಗಿ ಇಲಾಖೆ ಎಇಇ ಜಿ.ಎಸ್. ಪಾಟೀಲ, ಬಸವರಾಜ ತಳವಾರ, ಗೀತಾ ಆಲೂರ ಇದ್ದರು.



ತಹಸೀಲ್ದಾರ್ ಕಚೇರಿಯ ಸಭಾಭವನದಲ್ಲಿಯೇ ಪೂರ್ವಭಾವಿ ಸಭೆ ಆಯೋಜಿಸಲಾಗಿತ್ತು. ಆದರೆ, ಅಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಆರಂಭವಾದ ಹಿನ್ನೆಲೆಯಲ್ಲಿ ಅವಸರದಲ್ಲಿಯೇ ಸಭೆಯನ್ನು ಮೇಲ್ಮಹಡಿಗೆ ಸ್ಥಳಾಂತರ ಮಾಡಲಾಯಿತು.
। ಗೀತಾ ಆಲೂರ, ಸಹಾಯಕ ನಿರ್ದೇಶಕಿ ಸಮಾಜ ಕಲ್ಯಾಣ ಇಲಾಖೆ ರೋಣ

## ನವಲಗುಂದ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಶಾಸಕ ಎನ್.ಹೆಚ್. ಕೋನರಡ್ಡಿ ಕಾಂಗ್ರೇಸ್ ಅಭ್ಯರ್ಥಿ ಲಿಂಬಿಕಾಯಿ ಪರ ಬಿರುಸಿನ ಪ್ರಚಾರ

**ನವಲಗುಂದ:** ಪಶ್ಚಿಮ ಪದವೀಧರರ ವಿಧಾನ ಪರಿಷತ್ ಕ್ಷೇತ್ರದ ಚುನಾವಣೆಯ ಮತಯಾಚನೆಗಾಗಿ ನವಲಗುಂದ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ನವಲಗುಂದ ಶಾಸಕ ಎನ್.ಹೆಚ್. ಕೋನರಡ್ಡಿ ಅವರು ಬಿರುಸಿನ ಪ್ರಚಾರ ಕೈಗೊಂಡು ಕಾಂಗ್ರೇಸ್ ಅಭ್ಯರ್ಥಿ ಮೊಹನ ಲಿಂಬಿಕಾಯಿ ಅವರಿಗೆ ಮತ ನೀಡಿ ಆಶೀರ್ವದಿಸಲು ಮನವಿ ಮಾಡಿದರು.

ನವಲಗುಂದ ತಾಲ್ಲೂಕಿನ ಶಿರೂರ, ಗುಮ್ಮಗೋಳ, ಮೊರಬ, ತಲೆಮೊರಬ, ಶಿರಕೋಳ, ಹಣಸಿ, ಜಾವೂರ, ಅಳಗವಾಡಿ, ಗೊಬ್ಬರಗುಂಪಿ ಗ್ರಾಮಗಳಿಗೆ ಭೇಟಿ ನೀಡಿ ಮತ ಯಾಚನೆ ಮಾಡಿ ಮಾತನಾಡಿದ ಅವರು ಮೊಹನ ಲಿಂಬಿಕಾಯಿ ಅವರು ಪದವೀಧರರ ಧ್ವನಿಯಾಗಿ ಸದನದಲ್ಲಿ ಸಮರ್ಥವಾಗಿ ಹೋರಾಡಲು ಮತ್ತು ಶಿಕ್ಷಕರ, ಯುವಜನರ ಹಾಗೂ ಪದವೀಧರರ ಸಮಸ್ಯೆಗಳಿಗೆ ಸ್ಪಂದಿಸಲು ಅರ್ಹ ಅಭ್ಯರ್ಥಿ ಇದ್ದು ಅವರನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ಕ್ಷೇತ್ರದ ಪ್ರತಿ ಹಳ್ಳಿಯಲ್ಲಿಯೂ ಪದವೀಧರರನ್ನು ಭೇಟಿಯಾಗಿ ಚುನಾವಣೆಯ ಮಹತ್ವವನ್ನು ವಿವರಿಸಿದರು.

ಮುಖ್ಯ ಮಂತ್ರಿ ಡಿ.ಕೆ ಶಿವಕುಮಾರ ಉಪ ಮುಖ್ಯಮಂತ್ರಿ ಡಾ: ಜಿ ಪರಮೇಶ್ವರ ಕೆ.ಪಿ.ಸಿ.ಸಿ ಅಧ್ಯಕ್ಷರಾದ ಬಿ. ಕೆ, ಹರಿಪ್ರಸಾದ ಅವರ ನೇತೃತ್ವದಲ್ಲಿ ಸರ್ಕಾರ ಹಾಗೂ ಪಕ್ಷ ಮುಂಬರುವ ಜಿ.ಪಂ, ತಾ.ಪಂ ಗ್ರಾಪಂ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಸಮರ್ಥವಾಗಿ ಎದುರಿಸಿ ರಾಜ್ಯದಲ್ಲಿ ಕಾರ್ಯಕರ್ತರನ್ನು ಅಧಿಕಾರಕ್ಕೆ ತರಲು ಸಂಕಲ್ಪ ಹೊಂದಿದ್ದಾರೆ ಅದರ ಮುನ್ಸೂಚನೆಯಾಗಿ ಪಶ್ಚಿಮ ಪದವಿಧರರ ಮತಕ್ಷೇತ್ರದ ಅಭ್ಯರ್ಥಿ ಮೊಹನ ಲಿಂಬಿಕಾಯಿ ಅವರ ಗೆಲುವು ನಮಗೆ ಮಾದರಿಯಾಗಲಿದೆ ಎಂದು ಎಂದರು. .

ದಿ 17 ರಂದು ಬೆಳಿಗ್ಗೆ 11.00 ಘಂಟೆಗೆ ಧಾರವಾಡ ನವಲೂರಿನ ಹತ್ತಿರವಿರುವ ಹೊಟೆಲ್ ಮಯೂರನಲ್ಲಿ ಕೆ.ಪಿ.ಸಿ.ಸಿ ಅಧ್ಯಕ್ಷರಾದ ಬಿ.ಕೆ ಹರಿಪ್ರಸಾದ, ಲೋಕೋಪಯೋಗಿ ಸಚಿವರಾದ ಸತೀಶ ಜಾರಕಿಹೊಳಿ, ಉತ್ತರ ಕರ್ನಾಟಕ ಉಸ್ತುವಾರಿ ಸಚಿವ ಲಕ್ಷ್ಮಣ ಸವದಿ, ಗದಗ ಜಿಲ್ಲ ಉಸ್ತುವಾರಿ ಸಚಿವ ಬಸವರಾಜ ರಾಯರಡ್ಡಿ, ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ರುದ್ರಪ್ಪ ಲಮಾಣಿ ಸೇರಿದಂತೆ ನಾಲ್ಕು ಜಿಲ್ಲೆಯ ಕಾಂಗ್ರೇಸ್ ಪಕ್ಷದಿಂದ ಆಯ್ಕೆಯಾದ ಎಲ್ಲ ಶಾಸಕರುಗಳ ಮಹತ್ವದ ಸಭೆ ಕರೆಯಲಾಗಿದ್ದು ಮೊಹನ ಲಿಂಬಿಕಾಯಿ ಅವರ ಚುನಾವಣೆಯ ಗೆಲುವಿಗೆ ಸಂಕಲ್ಪ ನಿರ್ಣಯ ಕೈಗೊಳ್ಳಲಿದ್ದಾರೆ ಎಂದು ಕೋನರಡ್ಡಿ ಹೇಳಿದರು.

ಈ ಸಂದರ್ಭದಲ್ಲಿ ನವಲಗುಂದ ವಿಧಾನಸಭಾ ಕ್ಷೇತ್ರದ ಚುನಾವಣೆ ಉಸ್ತುವಾರಿ, ಪಿ.ಕೆ. ನೀರಲಕಟ್ಟಿ, ನವಲಗುಂದ ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ವರ್ಧಮಾನಗೌಡ ಹಿರೇಗೌಡರ, ಮಲಪ್ರಭಾ ನೀರು ಬಳಕೆದಾರರ ಸಂಘದ ಅಧ್ಯಕ್ಷ ಸದುಗೌಡ ಪಾಟೀಲ, ಮಾಲತೇಶ ಹಂಚಿನಾಳ, ಕಿಮ್ಸ್ ನಾಮನಿರ್ದೇಶ ಸದಸ್ಯ, ಎಮ್ ಎಸ್ ರೋಣದ, ಮಾಜಿ ಪುರಸಭೆ ಅಧ್ಯಕ್ಷ ಜೀವನ ಪವಾರ, ಮುರಗಯ್ಯಜ್ಜ ವೀರಕ್ತಮಠ, ಪ್ರಧಾನ ಕಾರ್ಯದರ್ಶಿ ಕಿರಣ ಉಳ್ಳಿಗೇರಿ ನವಲಗುಂದ ತಾಲ್ಲೂಕಾ , ಕೃಷಿಕ ಸಮಾಜದ ಅಧ್ಯಕ್ಷ ಸೋಮಣ್ಣ ಬಳಿಗೇರ, ಡಿ,ಎನ್ ಪಾಟೀಲ, ಅರ್ಜುನಗೌಡ ಬಾಳನಗೌಡ್ರ, ಶಂಕ್ರು ಗಾಣಿಗೇರ, ಮೈಲಾರಗೌಡ ಬಾಳನಗೌಡ್ರ, ಸುರೇಶ ಬೆಟಸೂರ, ರವಿ ಜಕಾತಿ, ಶಂಭು ಸಂಗರಡ್ಡಿ, ರವಿ ಕಗದಾಳ, ನಾರಾಯಣ ದೇವರಡ್ಡಿ, ಸಂತೋಷ ಗುಜ್ಜಳ, ಮಕಬುಲ ಮುಲ್ಲಾನವರ, ಅಡಿವೆಪ್ಪ ಗಾಣಿಗೇರ, ಶ್ರೀಮತಿ ಮಧುಮತಿ ರಾಯನಗೌಡ್ರ, ದ್ಯಾಮಣ್ಣ ಮಡಿವಾಳರ, ಮೌಲಾಸಾಬ ಮುರ್ತೋಜಿ, ನಿಂಗಪ್ಪ ಉಕ್ಕಲಿ ಅಶೋಕ ಮನಗೂಳಿ, ರಾಜು ವಡ್ಡರ, , ಚನ್ನಪ್ಪ ಕಂಪ್ಲಿ, ಗುರುಪಾದಪ್ಪ ಐಗಿಳಿ, ಬಸುವರಾಜ ಓಲೇಕಾರ, ಮುಂತಾದವರು ಉಪಸ್ಥಿತರಿದ್ದರು.



UTTARA KARNATAKA SUDDIGALU KANNADA DAILY MORNING OWNER, PUBLISHER, BY: AVINASH S SALIMANI, PUBLISHED FROM: 220 SHIVANAND NAGAR, NAVANAGAR, HUBLI_DHARWAD KARNATAKA- 580025, PRINTED AT: SHIVANI PRINTERS, NEW COURT OPPOSITE PLOT NO 28RS NO 312/ 3B GARAG COMPLEX GADAG, AT: GADAG- 582101, AT: KARNATAKA, EDITOR BY : AVINASH S SALIMANI